ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಜುಲೈ 06, 2022

ಸಂಪುಟ : 49 ಸಂಚಿಕೆ : 53 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


ಚಿತ್ರ: ಜಿಗಳಿ ಪ್ರಕಾಶ್

**ಸಸಿ ಮಡಿ ಚೆಲ್ಲಿದ ರೈತರು** ಮುಂಗಾರು ಹಂಗಾಮಿಗೆ ಭತ್ತದ ನಾಟಿ ಮಾಡಲು ಭದ್ರಾ ಅಚ್ಚುಕಟ್ಟಿನ ರೈತರು ಪಂಪ್ ಸೆಟ್ ನೀರಿನಲ್ಲಿ ಸಸಿ ಮಡಿ ಬೆಳೆಸಲು ಭತ್ತದ ಬೀಜ ಚೆಲ್ಲಿದ ದೃಶ್ಯ ಸೋಮವಾರ ಜಿಗಳಿ ಸಮೀಪ ಕ್ಯಾಮರ ಕಣ್ಣಿಗೆ ಸೆರೆ ಸಿಕ್ಕಿತು.

# ಸುಪ್ರೀಂ ನ್ಯಾಯಮೂರ್ತಿಗಳಿಂದ ಲಕ್ಷ್ಮಣ ರೇಖೆ ಉಲ್ಲಂಘನೆ: ಆಕ್ಷೇಪ

**ನೂಪುರ್ ಶರ್ಮಾ ಕುರಿತ ಹೇಳಿಕೆಗಳಿಗೆ ಮಾಜಿ ನ್ಯಾಯಮೂರ್ತಿಗಳ ಆಕ್ಷೇಪ**

- **ನ್ಯಾಯಾಂಗದ ಇತಿಹಾಸದಲ್ಲಿ ಈ ರೀತಿಯ ಉಲ್ಲಂಘನೆಗಳು ಯಾವತ್ತೂ ಆಗಿರಲಿಲ್ಲ**
- **ನ್ಯಾಯಾಧೀಶರ ಹೇಳಿಕೆಗಳಿಂದ ಅಳಿಸಲಾಗದ ಕಳಂಕ**
- **ದುರಾದೃಷ್ಟಕರ ಹೇಳಿಕೆಗಳಿಂದ ಆಘಾತದ ಅಲೆ**
- **ಎಫ್.ಐ.ಆರ್. ದಾಖಲಿಸಿದ ಕಾರಣಕ್ಕಾಗಿ ಬಂಧನ ಆಗಬೇಕು ಎಂದು ಟಿಪ್ಪಣಿ ಮಾಡಿರುವುದು ಕಾನೂನು ವಲಯಕ್ಕೆ ಅಚ್ಚರಿ ಹಾಗೂ ಆಘಾತ**

ನವದೆಹಲಿ, ಜು. 5 - ಬಿಜೆಪಿ ಸದಸ್ಯೆ ನೂಪುರ್ ಶರ್ಮಾ ಕುರಿತು ಇತ್ತೀಚೆಗೆ ಸುಪ್ರೀಂ ಕೋರ್ಟ್‌ನ ಇಬ್ಬರು ನ್ಯಾಯಮೂರ್ತಿಗಳು ಮಾಡಿದ ಟಿಪ್ಪಣಿಗಳಿಗೆ ಮಾಜಿ ನ್ಯಾಯಮೂರ್ತಿಗಳು ಹಾಗೂ ಸಮಾಜದ ಹಿರಿಯರ ಒಂದು ವರ್ಗ ಆಕ್ಷೇಪಿಸಿದ್ದು, ನ್ಯಾಯ ಮೂರ್ತಿಗಳು ಲಕ್ಷ್ಮಣ ರೇಖೆ ಮೀರಿದ್ದಾರೆ. ಇದನ್ನು ಸರಿಪಡಿಸಲು ಕ್ರಮ ತೆಗೆದುಕೊಳ್ಳಬೇಕಿದೆ ಎಂದಿದ್ದಾರೆ.

15 ಮಾಜಿ ನ್ಯಾಯಮೂರ್ತಿಗಳು, 17 ನಿವೃತ್ತ ಭಾರತೀಯ ಸೇವಾ ಅಧಿಕಾರಿಗಳು ಹಾಗೂ 25 ಗಣ್ಯರು ಬಹಿರಂಗ ಪತ್ರದ ಮೂಲಕ ತಮ್ಮ ನಿಲುವು ತಿಳಿಸಿದ್ದಾರೆ.

ನ್ಯಾಯಾಂಗದಲ್ಲಿ ಈ ರೀತಿಯ ಹೇಳಿಕೆ ನೀಡಿದ ಉದಾಹರಣೆಗಳಿಲ್ಲ. ಈ ಹೇಳಿಕೆಗಳಿಂದ ನ್ಯಾಯಿಕ ವ್ಯವಸ್ಥೆ ಮೇಲೆ ಅಳಿಸಲಾಗದ ಕಳಂಕ ಉಂಟಾಗಿದೆ. ಇದರಿಂದ ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ದೇಶದ ಭದ್ರತೆಯ ಮೇಲೆ ಗಂಭೀರ ಪರಿಣಾಮಗಳಾಗಲಿದ್ದು, ಇದನ್ನು ಸರಿಪಡಿಸುವ ಕ್ರಮ ತೆಗೆದುಕೊಳ್ಳಬೇಕಿದೆ ಎಂದವರು ಹೇಳಿದ್ದಾರೆ.

ಬಾಂಬೆ ಹೈಕೋರ್ಟ್ ಮಾಜಿ ಮುಖ್ಯ ನ್ಯಾಯಮೂರ್ತಿ ಕ್ಷಿತಿಜ್ ವ್ಯಾಸ್, ಗುಜರಾತ್ ಹೈಕೋರ್ಟ್ ಮಾಜಿ ನ್ಯಾಯಮೂರ್ತಿ ಎಸ್.ಎಂ. ಸೋನಿ, ರಾಜಸ್ಥಾನ ಹೈಕೋರ್ಟ್ ಮಾಜಿ ನ್ಯಾಯಮೂರ್ತಿಗಳಾದ ಆರ್.ಎಸ್. ರಾಥೋಡ್ ಹಾಗೂ ಪ್ರಶಾಂತ್ ಅಗರ್‌ವಾಲ್ ಮತ್ತು ದೆಹಲಿ ಹೈಕೋರ್ಟ್ ಮಾಜಿ ನ್ಯಾಯಮೂರ್ತಿ ಎಸ್.ಎನ್. ಢಿಂಗ್ರ ಸಹಿ ಹಾಕಿದವರಲ್ಲಿ ಸೇರಿದ್ದಾರೆ.

ನಿವೃತ್ತ ಐಎಎಸ್ ಅಧಿಕಾರಿಗಳಾದ ಆರ್.ಎಸ್. ಗೋಪಾಲನ್ ಹಾಗೂ ಎಸ್.ಕೃಷ್ಣ ಕುಮಾರ್, ನಿವೃತ್ತ ರಾಯಭಾರಿ ನಿರಂಜನ್ ದೇಸಾಯಿ, ಮಾಜಿ ಡಿಜಿಪಿ ಎಸ್.ಪಿ. ವೈದ್ ಮತ್ತಿತರರು ಪತ್ರಕ್ಕೆ ಸಹಿ ಹಾಕಿದ್ದಾರೆ.

ಯಾವು ದೇ (4ನೇ ಪುಟಕ್ಕೆ)

# ಹೆಚ್ಚಿದ ಮಳೆ : ಏರಿದ ಭದ್ರಾ ಒಳಹರಿವು

ಮಲೇಬೆನ್ನೂರು, ಜು.5, ಮುಂಗಾರು ಮಳೆ ಸೋಮವಾರ ಮತ್ತು ಮಂಗಳವಾರ ಎಲ್ಲಾ ಕಡೆ ಆರಂಭವಾಗಿದ್ದು, ಮಲೆನಾಡಿನಲ್ಲಿ ಮಳೆ ಪ್ರಮಾಣ ಹೆಚ್ಚಾಗುತ್ತಿದೆ.

ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲೆಗಳಲ್ಲಿ ಕಳೆದ ವಾರದಿಂದಲೇ ವ್ಯಾಪಕ ಮಳೆ ಸುರಿಯುತ್ತಿದ್ದು, ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ 4-5 ದಿನಗಳಿಂದ ಮಳೆ ಪ್ರಾರಂಭವಾಗಿದೆ.

ಕುದುರೆಮುಖ, ಕೊಪ್ಪ, ಬಾಳೆಹೊನ್ನೂರು ಭಾಗದಲ್ಲಿ ಸುರಿದ ಮಳೆಗೆ ಕಳಸ-ಹೊರನಾಡು ನಡುವಿನ ಹೆಬ್ಬಾಳೆ ಸಂಪರ್ಕ ಸೇತುವೆ ಭದ್ರಾ ನದಿ ನೀರಿನಲ್ಲಿ ಮುಳುಗಡೆ ಆಗಿದೆ.

ಈ ವರ್ಷ ಇದೇ ಮೊದಲ ಬಾರಿಗೆ ಈ ಸೇತುವೆ ಮೇಲೆ ಸುಮಾರು 2 ಅಡಿ ನೀರು ಹರಿಯುತ್ತಿದ್ದು, ಭದ್ರಾ ಜಲಾಶಯಕ್ಕೆ ಬರುವ ನೀರಿನ ಒಳಹರಿವು ಹೆಚ್ಚಳವಾಗಿದೆ.

ಸೋಮವಾರ 13,405 ಕ್ಯೂಸೆಕ್ಸ್ ಇದ್ದ ಒಳಹರಿವು ಮಂಗಳವಾರ 30167 ಕ್ಯೂಸೆಕ್ಸ್‌ಗೆ ಏರಿಕೆ ಆಗಿದ್ದು ಜಲಾಶಯದ ನೀರಿನ ಮಟ್ಟ 158 ಅಡಿ 7 ಇಂಚು ಆಗಿದೆ.ಕಳೆದ ವರ್ಷ ಈ ದಿನ ಜಲಾಶಯದಲ್ಲಿ 155 ಅಡಿ 3 ಇಂಚು ನೀರಿತ್ತು.



**ಕಳಸ-ಹೊರನಾಡು ಸಂಪರ್ಕ ಸೇತುವೆ ಮುಳುಗಡೆ**

**ರೈತರ ಚಿತ್ತ ಮಲೆನಾಡಿನತ್ತ :** ಭದ್ರಾ ಜಲಾಶಯಕ್ಕೆ 165 ಅಡಿ ನೀರು ಬಂದ ನಂತರ ಮುಂಗಾರು ಹಂಗಾಮಿನ ಬೆಳೆಗಳಿಗೆ ನೀರು ಹರಿಸುವ ಬಗ್ಗೆ ಭದ್ರಾ ಕಾಡಾ ಸಭೆ ತೀರ್ಮಾನ ಕೈಗೊಂಡ ನಂತರ ಅಚ್ಚುಕಟ್ಟಿನ ರೈತರ ಮಲೆನಾಡಿನಲ್ಲಿ ಬರುವ ಮಳೆಯನ್ನು ಎದುರು ನೋಡುವಂತಾಗಿದೆ. ಕಳೆದ 2 ವರ್ಷವೂ ಜುಲೈ 23 ಕ್ಕೆ ನಾಲೆಗಳಿಗೆ ನೀರು ಬಿಟ್ಟಿರುವುದರಿಂದ ಈ ಬಾರಿಯೂ ಅದೇ ಸಮಯಕ್ಕೆ ನಾಲೆಗೆ ನೀರು ಹರಿಸುವ ಸಾಧ್ಯತೆ ಹೆಚ್ಚಾಗಿದೆ. ಅಲ್ಲದೆ ಈಗ ಎಲ್ಲಾ ಕಡೆ ಮಳೆ ಆಗುತ್ತಿರುವುದರಿಂದ ತೋಟದ ಬೆಳೆಗಾರರಿಗೂ ಸದ್ಯ ನೀರಿನ ಅವಶ್ಯಕತೆ ಇಲ್ಲ.

ಹವಾಮಾನ ಇಲಾಖೆಯು ಇನ್ನೂ 4 ದಿನ ಮಳೆ ಆಗುವ ಮುನ್ಸೂಚನೆ ನೀಡಿರುವುದರಿಂದ ಜುಲೈ 15 ರ ವೇಳೆಗೆ (4ನೇ ಪುಟಕ್ಕೆ)

# ವಾಸ್ತು ತಜ್ಞ ಗುರೂಜಿ ಹತ್ಯೆ




ಹುಬ್ಬಳ್ಳಿ, ಜು. 5 - ವಾಸ್ತು ತಜ್ಞ ಚಂದ್ರಶೇಖರ ಗುರೂಜಿ ಅವರನ್ನು ನಗರದ ಉಣಕಲ್ ಪ್ರೆಸಿಡೆಂಟ್ ಹೋಟೆಲ್ ಸ್ವಾಗತಕಾರರ ಕೌಂಟರ್ ಬಳಿ ದುಷ್ಕರ್ಮಿಗಳು ಚಾಕುವಿನಿಂದ ಇರಿದು ಕೊಲೆ ಮಾಡಿದ ಘಟನೆ ಮಂಗಳವಾರ ನಡೆದಿದೆ.

ಹೋಟೆಲ್ ಸ್ವಾಗತಕಾರರ ಕೇಂದ್ರದ ಬಳಿ ಭಕ್ತರ ಸೋಗಿನಲ್ಲಿ ಬಂದು ಹತ್ಯೆ ಮಾಡಿ, ದುಷ್ಕರ್ಮಿಗಳು ಪರಾರಿ ಆಗಿದ್ದರು.

ನಂತರ ಕ್ರಮ ತೆಗೆದುಕೊಂಡ ಪೊಲೀಸರು, ಇಬ್ಬರು ಪ್ರಮುಖ ಆರೋಪಿ ಗಳನ್ನು ಬೆಳಗಾವಿ ಜಿಲ್ಲೆಯ ರಾಮದುರ್ಗದಲ್ಲಿ ಬಂಧಿಸಿದ್ದಾರೆ.

ಇತ್ತೀಚೆಗಷ್ಟೇ ಗುರೂಜಿ ಸಹೋ ದರರೊಬ್ಬರ ಮೊಮ್ಮಗನ ಸಾವಾ ಗಿತ್ತು. ಅವರ ಕುಟುಂಬದವರನ್ನು ಭೇಟಿಯಾಗಲು ಗುರೂಜಿ ಹುಬ್ಬಳ್ಳಿಗೆ ಬಂದು 4 ದಿನ ಪ್ರೆಸಿಡೆಂಟ್ ಹೋಟೆಲ್‌ನಲ್ಲಿ 220 (4ನೇ ಪುಟಕ್ಕೆ)

**ಮಳೆಯಿಂದ ಮೈದುಂಬಿಕೊಂಡ ತುಂಗಭದ್ರಾ**



ಹರಿಹರ, ಜು. 5 - ಶಿವಮೊಗ್ಗ, ಶೃಂಗೇರಿ, ತೀರ್ಥಹಳ್ಳಿ ಸೇರಿದಂತೆ ಹಲವೆಡೆ ಕಳೆದ ನಾಲ್ಕು ದಿನಗಳಿಂದ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ತುಂಗಭದ್ರಾ ನದಿ ಮೈದುಂಬಿಕೊಂಡು ಹರಿಯುತ್ತಿದೆ.


ಮಳೆ ಇನ್ನೂ ನಾಲ್ಕು ದಿನಗಳ ಕಾಲ ಬರುತ್ತದೆ ಎಂದು ಹವಾಮಾನ ಇಲಾಖೆಯ ಸೂಚನೆ ನೀಡಿದೆ. ಹೀಗಾಗಿ ತುಂಗಭದ್ರಾ ನದಿಯ ನೀರಿನ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚಾಗುವ ಸಂಭವವಿದೆ.

ನಗರದ ಹೊಳೆ ದಂಡೆಯಲ್ಲಿನ ಕೈಲಾಸ ನಗರ, ಗಂಗಾ ನಗರ ತೆಗ್ಗಿನಕೇರಿ, ಹಳೆ ಭರಂಪುರ, ಆಶ್ರಯ ಹಿಂಬದಿ ಮೆಟ್ಟಿಲು ಹೊಳೆ ರಸ್ತೆಯ ಮತ್ತು ನಗರದ ಹೊರವಲಯದ ಗುತ್ತೂರು, ದೀಟೂರು, ಸಾರಥಿ ಪಾಮೇನಹಳ್ಳಿ ಸೇರಿದಂತೆ ಇತರೆ ಗ್ರಾಮದವರು ಎಚ್ಚರ ವಹಿಸಲು ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ಅವರು ಸೂಚನೆ ನೀಡಿದ್ದಾರೆ.

ಜೊತೆಗೆ ಜಾನುವಾರುಗಳನ್ನು ನದಿಯಲ್ಲಿ ಬಿಡದಂತೆ ಎಚ್ಚರಿಕೆ ವಹಿಸಬೇಕು ಎಂದೂ ಹೇಳಿದ್ದಾರೆ.

# ಟ್ರಿಬಲ್ ರೈಡಿಂಗ್, ಕರ್ಕಶ ಹಾರ್ನ್‌ಗಳ ಬಳಕೆ, ಅತಿ ವೇಗ ಕಡಿವಾಣಕ್ಕೆ ನಿಗಾ

ದಾವಣಗೆರೆ, ಜು.5- ಸಂಚಾರಿ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ದಂಡ ವಸೂಲಿ ಮಾಡುವುದು ಸಾಮಾನ್ಯ. ಚಾಲನಾ ಪರವಾನಿಗೆ ಅಮಾನತ್ತು ಮಾಡುವುದು ವಿಶೇಷ. ಇವುಗಳಂತೆ ಇನ್ನು ಮುಂದೆ ತ್ರಿಬಲ್ ರೈಡಿಂಗ್, ಕರ್ಕಶ ಹಾರ್ನ್‌ಗಳ ಬಳಕೆ, ಅತಿಯಾದ ವೇಗ ಇತರೆ ಸಂಚಾರ ನಿಯಮಗಳ ಉಲ್ಲಂಘನೆ ಪ್ರಕರಣಗಳ ಬಗ್ಗೆ ತೀವ್ರ ಗಮನ ಹರಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕ ಸಿ.ಬಿ.ರಿಷ್ಯಂತ್ ತಿಳಿಸಿದ್ದಾರೆ.



ನಗರದ ಬಡಾವಣೆ ಪೊಲೀಸ್ ಠಾಣಾ ಆವರಣದಲ್ಲಿ ಇಂದು ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದಲ್ಲಿ ಸುಗಮ ಮತ್ತು ಸುಲಲಿತ ಸಂಚಾರಕ್ಕಾಗಿ ಹಲವಾರು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಹೆಲ್ಮೆಟ್ ರಹಿತ, ಮದ್ಯ ಸೇವಿಸಿ ವಾಹನಗಳ ಚಾಲನೆ (2ನೇ ಪುಟಕ್ಕೆ)

**ಜಿಲ್ಲೆಯಲ್ಲಿ ಲೈನ್ ಡಿಸಿಪ್ಲೀನ್ ಪೈಲೆಟ್ ಯೋಜನೆ ಜಾರಿ**

ರಾಜ್ಯ ಪೊಲೀಸ್ ಮಹಾನಿರ್ದೇಶಕರ ಸೂಚನೆ ಮೇರೆಗೆ ದಾವಣಗೆರೆ ಜಿಲ್ಲೆಯಲ್ಲಿ ಲೈನ್ ಡಿಸಿಪ್ಲೀನ್ ಪೈಲೆಟ್ ಯೋಜನೆ ಜಾರಿಗೊಳಿಸಲಾಗಿದೆ. ನಿಯಮ ಉಲ್ಲಂಘನೆ ಮಾಡಿದ ವಾಹನಗಳಿಗೆ ಇನ್ನು ಮುಂದೆ ದಂಡ ವಿಧಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕ ಸಿ.ಬಿ.ರಿಷ್ಯಂತ್ ಎಚ್ಚರಿಸಿದ್ದಾರೆ.

ಲೈನ್ ಡಿಸಿಪ್ಲೀನ್ ಪೈಲಟ್ ಯೋಜನೆ ಅಂದರೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುವ ಭಾರೀ ಗಾತ್ರದ ಲಾರಿ ಇತರೆ ವಾಹನಗಳು ರಸ್ತೆಯ ಒಂದು ಭಾಗದಲ್ಲಿ, ವೇಗವಾಗಿ ಚಲಿಸುವ ಕಾರು, ಇತರೆ ವಾಹನಗಳು ರಸ್ತೆ ಮಧ್ಯೆದಲ್ಲಿ ಚಲಿಸುವ ವ್ಯವಸ್ಥೆ ಮಾಡಲಾಗಿದೆ. ಹಲವಾರು ಕಡೆ ಸೂಚನಾ ಫಲಕಗಳನ್ನು ಹಾಕಲಾಗಿದೆ. ಅದರಂತೆ ವಾಹನಗಳು ಸಾಗಬೇಕೆಂದರು. ಟೋಲ್ (2ನೇ ಪುಟಕ್ಕೆ)

**ಕೈಲಾಸ ಸಮಾರಾಧನೆ ಆಹ್ವಾನ**



**ದಿ|| ಶ್ರೀ ಮಾರ್ತಾಂಡಪ್ಪ ಎಂ. ತೋಟಗೇರ್**
ಜನನ : 13.06.1955 - ಮರಣ : 02.07.2022
ರಾಣೇಬೆನ್ನೂರು ತಾಲ್ಲೂಕು ಖಂಡೇರಾಯನಹಳ್ಳಿ ಗ್ರಾಮದ ದಾವಣಗೆರೆ ವಾಸಿ ಶ್ರೀ ಮಾರ್ತಾಂಡಪ್ಪ ಎಂ. ತೋಟಗೇರ್‌ರವರ
**"ಕೈಲಾಸ ಸಮಾರಾಧನೆ"ಯನ್ನು**
ದಿ. : 06.07.2022ರ ಬುಧವಾರದಂದು ಬೆಳಿಗ್ಗೆ ಮೃತರ ಸ್ವಗೃಹದಲ್ಲಿ ನೇರವೇರಿಸಲಾಗುವುದು. ತಾವುಗಳ ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖಿತಪ್ತರು : ಮೃತರ ಧರ್ಮಪತ್ನಿ : ಶ್ರೀಮತಿ ಲಕ್ಷ್ಮಮ್ಮ
ಮಗ-ಸೊಸೆ, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಬಂಧು-ಮಿತ್ರರು
ಫೋ. : 99642 22542, 88843 63938
ಸ್ಥಳ : ಕಾಳಿದಾಸ ಸರ್ಕಲ್ ಹತ್ತಿರ, ಜಯನಗರ, ಬಿ ಬ್ಲಾಕ್, ದಾವಣಗೆರೆ.

**ಹೃದಯ ತುಂಬಿದ ಕೃತಜ್ಞತೆಗಳು**

ಆತ್ಮೀಯರೇ,
ನನ್ನ ಜನ್ಮದಿನದಂದು ವೈಯಕ್ತಿಕವಾಗಿ ಕರೆ ಮಾಡಿ, ಸಾಮಾಜಿಕ ಜಾಲತಾಣದಲ್ಲಿ ಸಂದೇಶಗಳನ್ನು ಕಳುಹಿಸಿ ಶುಭಾಶಯ ಕೋರಿದ ಪ್ರತಿಯೊಬ್ಬರಿಗೂ ನನ್ನ ಹೃದಯಪೂರ್ವಕ ಧನ್ಯವಾದಗಳು.
ನೀವುಗಳು ನನ್ನ ಮೇಲೆ ತೋರಿರುವ ಈ ಪ್ರೀತಿಗೆ ನಾನು ಸದಾ ಚಿರಋಣಿ.
ನಿಮ್ಮ ಈ ಪ್ರೀತಿ, ವಿಶ್ವಾಸ ಹಾಗೂ ಬೆಂಬಲ ಸದಾ ನನ್ನ ಮೇಲೆ ಹೀಗೆ ಇರಲಿ ಎಂದು ಆಶಿಸುತ್ತೇನೆ.



ಬಿ.ಜಿ. ಅಜಯ್ ಕುಮಾರ್
ಮಾಜಿ ಮಹಾಪೌರರು, ಸದಸ್ಯರು, 17 ನೇ ವಾರ್ಡ್ (ಪಿ.ಜೆ. ಬಡಾವಣೆ), ಮಹಾನಗರ ಪಾಲಿಕೆ, ದಾವಣಗೆರೆ.



# ಕೆಎಸ್ಸಾರ್ಟಿಸಿ ಬಸ್ ಟೈರ್ ಸಿಡಿತ : ಚಾಲಕನ ಸಮಯ ಪ್ರಜ್ಞೆಯಿಂದ ಪಾರಾದ ಪ್ರಯಾಣಿಕರು

ಹರಿಹರ, ಜು. 5 - ನಗರದ ಶಿವಮೊಗ್ಗ ರಸ್ತೆಯಲ್ಲಿ ಪ್ರಯಾಣಿಕರಿಂದ ಕಿಕ್ಕಿರಿದು ತುಂಬಿ ಉಕ್ಕಡಗಾತ್ರಿ ಮಾರ್ಗವಾಗಿ ಸಂಚಾರ ಮಾಡುತ್ತಿದ್ದ ಕೆ. ಎಸ್.ಆರ್.ಟಿ.ಸಿ. ಬಸ್ ಟೈರ್ ಸಿಡಿದ ಘಟನೆ ನಡೆ ದಿದೆ. ಚಾಲಕನ ಸಮಯ ಪ್ರಜ್ಞೆಯಿಂದಾಗಿ ಯಾವುದೇ ರೀತಿಯ ಅಪಾಯ ಸಂಭವಿಸದೇ ಪ್ರಯಾಣಿಕರು ಪಾರಾಗಿದ್ದಾರೆ.



ನಗರದ ಕೆ.ಎಸ್.ಆರ್.ಟಿ.ಸಿ ನಿಲ್ದಾಣದಿಂದ ಭಾನುವಳ್ಳಿ ಮಾರ್ಗವಾಗಿ ಉಕ್ಕಡಗಾತ್ರಿ ಗ್ರಾಮಕ್ಕೆ ಸಂಚರಿಸುತ್ತಿದ್ದ ಕೆ.ಎಸ್.ಆರ್.ಟಿ.ಸಿ. ಬಸ್‌ನಲ್ಲಿ ಸರ್ಕಾರದ ನಿಯಮ ಮೀರಿ ಪ್ರಯಾಣಿಕರನ್ನು ತುಂಬಿಕೊಂಡು ಬಸ್ ಸಂಚರಿಸುತ್ತಿತ್ತು.

ನೀರಾವರಿ ಇಲಾಖೆಯ ಹತ್ತಿರ ಹೋಗುವಾಗ ದಿಢೀರ್ ಮುಂದಿನ ಟೈರ್ ಬ್ಲಾಷ್ಟ್ ಆಯಿತು. ಬಸ್ ಚಾಲಕ ಪರಶುರಾಮ್ ಬಸ್ ನಿಯಂತ್ರಿಸುವಲ್ಲಿ ಜಾಣ್ಮೆಯನ್ನು ಮೆರೆದು ಪ್ರಯಾಣಿಕರಿಗೆ ಯಾವುದೇ ರೀತಿಯ ತೊಂದರೆಗಳು ಆಗದಂತೆ ಮುಂಜಾಗ್ರತೆ ವಹಿಸಿದ್ದಾರೆ. ನಂತರ ಬೇರೆ ಬಸ್‌ನಲ್ಲಿ ಪ್ರಯಾಣಿಕರನ್ನು ಕಳಿಸಲಾಯಿತು.

ಮಂಗಳವಾರ ಸಂತೆಯ ದಿನವಾಗಿದ್ದರಿಂದ ಮತ್ತು ಶಾಲಾ-ಕಾಲೇಜು ವಿದ್ಯಾರ್ಥಿಗಳು ಹೆಚ್ಚಿನ ಪ್ರಮಾಣದಲ್ಲಿ ಬಸ್‌ನಲ್ಲಿ ಸಂಚಾರ ಮಾಡುತ್ತಿದ್ದರು. ಕೆ.ಎಸ್.ಆರ್.ಟಿ.ಸಿ ನಿಲ್ದಾಣದ ನಿಯಂತ್ರಣಾಧಿಕಾರಿಗಳು ಇಂತಹ ಸಮಯದಲ್ಲಿ ಗ್ರಾಮಗಳಿಗೆ ಹೆಚ್ಚಿನ ಬಸ್ ವ್ಯವಸ್ಥೆ ಮಾಡಬೇಕು ಎಂದು ಪ್ರಯಾಣಿಕರು ಒತ್ತಾಯಿಸಿದ್ದಾರೆ.

# ವಿಕಲಚೇತನರ ಇಲಾಖೆಯ ವಾಹನಗಳಲ್ಲಿ ಭ್ರಷ್ಟಾಚಾರ

**ಹರಿಹರ ಶಾಸಕ ಎಸ್. ರಾಮಪ್ಪ**

ಹರಿಹರ, ಜೂ. 5 - ಜಿಲ್ಲಾ ವಿಕಲಚೇತನರ ಇಲಾಖೆಯ ವತಿಯಿಂದ ನೀಡಲಾದ ವಾಹನಗಳಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ತಿಳಿದು ಬಂದಿದ್ದು, ಇನ್ನೂ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿ, ನಂತರದಲ್ಲಿ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳ ಹತ್ತಿರ ಮಾತನಾಡುವುದಾಗಿ ಶಾಸಕ ಎಸ್. ರಾಮಪ್ಪ ಹೇಳಿದರು.




ನಗರದ ತಾ.ಪಂ. ಕಚೇರಿಯ ಆವರಣದಲ್ಲಿ ಹರಿಹರ ತಾಲ್ಲೂಕು ವಿಕಲಚೇತನ 6 ಫಲಾನುಭವಿಗಳಿಗೆ ವಾಹನಗಳ ಕೀ ವಿತರಣೆ ಮಾಡಿ ನಂತರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ವಿಕಲಚೇತನರಿಗೆ ಉಚಿತವಾಗಿ ನೀಡಲಾದ ವಾಹನಕ್ಕೆ ಹಣ ಪಡೆದುಕೊಂಡು ವಾಹನ ನೀಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು, ಮುಂದಿನ ದಿನಗಳಲ್ಲಿ ಇದರ ಬಗ್ಗೆ ಸಂಪೂರ್ಣ ಮಾಹಿತಿ ಸಮೇತ ಉತ್ತರ ಕೊಡುವುದಾಗಿ ಶಾಸಕರು ಹೇಳಿದರು.

ಜಿಲ್ಲೆಯಾದ್ಯಂತ ಸುಮಾರು 35 ವಾಹನಗಳನ್ನು ನೀಡಲಾಗಿದೆ. ಜಿಲ್ಲೆಯ ವಿಕಲಚೇತನ ಅಧಿಕಾರಿ ಪ್ರಕಾಶ್ ಎಂಬುವವರು ನಮ್ಮ ತಾಲ್ಲೂಕಿನ ವಿಕಲಚೇತನರಿಗೆ 10 ವಾಹನ ನೀಡುವುದಾಗಿ ಹೇಳಿ ಹೋಗಿದ್ದರು. ಆದರೆ, ಈಗ 6 ವಾಹನ ಮಾತ್ರ ಕೊಟ್ಟಿದ್ದು ಅದನ್ನು ಪ್ರಶ್ನೆ ಮಾಡಿದರೆ ಇನ್ನೂ 4 ವಾಹನ ಕಳಿಸುವುದಾಗಿ ಹೇಳಿದ್ದಾರೆ ಎಂದರು.

ಇದರಲ್ಲೂ ಸಹ ನಮ್ಮ ತಾಲ್ಲೂಕಿಗೆ ಬಿಜೆಪಿ ಪಕ್ಷ ತಾರತಮ್ಯವನ್ನು ಮಾಡಿ ಮತ್ತು ವಾಹನಗಳ ಮೇಲೆ ರಾಜ್ಯದ ಮುಖ್ಯಮಂತ್ರಿಗಳ ಮತ್ತು ಸಚಿವರ ಭಾವಚಿತ್ರವನ್ನು ಹಾಕಿದ್ದಾರೆ. ನಾನು ಸ್ಥಳೀಯ ಶಾಸಕ ನನ್ನ ಭಾವಚಿತ್ರವನ್ನು ಹಾಕಬಹುದಿತ್ತು. ಇದರಲ್ಲೂ ಸಹ ನಮಗೆ ನೋವು ತರಿಸುವ ಕಾರ್ಯವನ್ನು ಮಾಡಲಾಗಿದೆ ಎಂದು ಹೇಳಿದರು.

ನನ್ನ ಅನುದಾನದಲ್ಲಿ ವಿಕಲಚೇತನರಿಗೆ ಕಳೆದ ವರ್ಷ 10 ಲಕ್ಷ ರೂಪಾಯಿ ವೆಚ್ಚದಲ್ಲಿ ವಾಹನಗಳನ್ನು ವಿತರಣೆ ಮಾಡಲಾಗಿತ್ತು. ಈ ಬಾರಿ ಕೂಡ ನನ್ನ ಅನುದಾನದಲ್ಲಿ 10 ಲಕ್ಷ ರೂಪಾಯಿ ವೆಚ್ಚದಲ್ಲಿ ತಾಲ್ಲೂಕಿನ ವಿಕಲಚೇತನರಿಗೆ ವಾಹನಗಳನ್ನು ವಿತರಣೆ ಮಾಡುವುದಾಗಿ ಅವರು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿ ಲೆಕ್ಕಾಧಿಕಾರಿ ಸೌಮ್ಯಶ್ರೀ, ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಜಿ.ಡಿ. ಗಂಗಾಧರನ್, ತಾ.ಪಂ. ಲೆಕ್ಕಾಧಿಕಾರಿ ಲಿಂಗರಾಜ್, ತಾಲ್ಲೂಕು ವಿಕಲಚೇತನ ಇಲಾಖೆಯ ಅಧಿಕಾರಿ ಶಶಿಕಲಾ, ಹರಿಹರೇಶ್ವರ ಬ್ಯಾಂಕ್ ನಿರ್ದೇಶಕ ಅನ್ವರ್ ಪಾಷಾ, ಫಲಾನುಭವಿಗಳಾದ ಪರಶುರಾಮಪ್ಪ, ಬಿ. ನಾಗರಾಜ್, ಲಕ್ಷ್ಮಿಬಾಯಿ, ಧರ್ಮಪ್ಪ, ಸಿದ್ದೇಶ್, ಬಿ.ಸಿ. ಗಂಗಮ್ಮ ಮತ್ತಿತರರು ಹಾಜರಿದ್ದರು.

# ಜನರ ಲೂಟಿ ಮಾಡುವ ರೀತಿ ಸಂವಿಧಾನ ರಚನೆಯಾಗಿದೆ

**ಕೇರಳ ಸಚಿವ ಚೆರಿಯನ್ ಟೀಕೆ**

ತಿರುವನಂತಪುರ, ಜು. 5 - ನಮ್ಮ ಸಂವಿಧಾನವು ಶೋಷಣೆ ತಡೆಯುವ ಬಗ್ಗೆ ಗಮನ ಹರಿಸುವುದಿಲ್ಲ. ದೇಶದ ಜನರನ್ನು ಲೂಟಿ ಮಾಡಲು ನೆರವಾಗುವ ರೀತಿಯಲ್ಲಿ ಅದನ್ನು ಬರೆಯಲಾಗಿದೆ ಎಂದು ಕೇರಳದ ಸಚಿವ ಸಜಿ ಚೆರಿಯನ್ ಅವರು ಟೀಕಿಸಿದ್ದಾರೆ. ಪಟ್ಟಣಂತಿಟ್ಟ ಜಿಲ್ಲೆಯ ಮಲ್ಲಪಳ್ಳಿ ಎಂಬಲ್ಲಿ ಇತ್ತೀಚೆಗೆ ಆಯೋಜಿಸಲಾಗಿದ್ದ ಸಮಾರಂಭವೊಂದರಲ್ಲಿ ಮಾತನಾಡುತ್ತಿದ್ದ ಅವರು, ಭಾರತದ ಸಂವಿಧಾನವನ್ನು ಸುಂದರವಾಗಿ ಬರೆಯಲಾಗಿದೆ ಎಂದು ನಾವೆಲ್ಲರೂ ಹೇಳುತ್ತೇವೆ. ಆದರೆ, ಈ ಸಂವಿಧಾನ ಬಹಳಷ್ಟು ಜನರ ಲೂಟಿಗೆ ನೆರವಾಗಿದೆ ಎಂದಿದ್ದಾರೆ.

ಅವರು ಆಡಿದ ಮಾತುಗಳನ್ನು ನಂತರದಲ್ಲಿ ಸ್ಥಳೀಯ ಸುದ್ದಿ ವಾಹಿನಿಗಳು ಪ್ರಸಾರ ಮಾಡಿವೆ.

ದೇಶದ ಸಂವಿಧಾನವನ್ನು ಬ್ರಿಟಿಷರು ಸಂಗ್ರಹಿಸಿದ್ದಾರೆ. ಒಬ್ಬ ಭಾರತೀಯ ಅದನ್ನು ಬರೆದಿದ್ದಾರೆ. ಅದನ್ನೇ ನಾವು ಕಳೆದ 75 ವರ್ಷಗಳಿಂದ ಅನುಷ್ಠಾನಗೊಳಿಸಿದ್ದೇವೆ ಎಂದು ಸಚಿವರು ಹೇಳಿದ್ದಾರೆ.

ಸೆಕ್ಯುಲರಿಸಂ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸಂವಿಧಾನದಲ್ಲಿ ಕೇವಲ ಉಲ್ಲೇಖಿಸಲಾಗಿದೆಯಷ್ಟೇ ಎಂದೂ ಅವರು ಹೇಳಿದ್ದಾರೆ.

ಕಾರ್ಮಿಕರ ಪ್ರತಿಭಟನೆಯನ್ನು ನಮ್ಮ ದೇಶ ಒಪ್ಪುವುದಿಲ್ಲ. ಭಾರತೀಯ ಸಂವಿಧಾನ ಕಾರ್ಮಿಕರ ಶೋಷಣೆಗೆ ಅತಿ ಹೆಚ್ಚು ಅವಕಾಶ ಮಾಡಿಕೊಟ್ಟಿದೆ. ಇದರಿಂದಾಗಿ ದೇಶದ ಕಾರ್ಪೊರೇಟ್ ವಲಯದಲ್ಲಿ ಕೆಲ ಕೋಟ್ಯಾಧೀಶರು ಬೆಳೆಯುತ್ತಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

# ಮಕ್ಕಳಿಗೆ ಚದುರಂಗ ತರಬೇತಿ ಶಿಬಿರ

ದಾವಣಗೆರೆ, ಜು. 5- ನ್ಯೂ ಜಿಲ್ಲಾ ಚೆಸ್ ಅಸೋಸಿಯೇಷನ್ ಇವರ ಆಶ್ರಯದಲ್ಲಿ ದಾವಣಗೆರೆ ಜಿಲ್ಲೆಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗೆ ಎರಡು ದಿನಗಳ ಉಚಿತ ಚದುರಂಗ (ಚೆಸ್) ತರಬೇತಿ ಶಿಬಿರ ನಡೆಯಲಿದೆ. ಇದೇ ದಿನಾಂಕ 16 ಮತ್ತು 17 ರಂದು ನಗರದ ರೋಟರಿ ಬಾಲಭವನದಲ್ಲಿ ಶಿಬಿರ ನಡೆಯಲಿದೆ. ಆಸಕ್ತರು ಇದೇ ದಿನಾಂಕ 14ರೊಳಗೆ ಹೆಸರು ನೊಂದಾಯಿಸಿ. ವಿವರಕ್ಕೆ ಸಂಪರ್ಕಿಸಿ: 98809 03417, 76764 83477, 98441 53466, 88803 24455, 98444 68767, 99640 57162.

**19ನೇ ವರ್ಷದ ಪುಣ್ಯಸ್ಮರಣೆ**



**ಲಿಂ. ಎನ್.ಎಸ್. ಹಾಲಸಿದ್ದಪ್ಪ**
KEB, AEE , ದಾವಣಗೆರೆ. ನೀವು ನಮ್ಮನ್ನೂ ಅಗಲಿ ಇಂದಿಗೆ 19 ವರ್ಷಗಳಾದರೂ ಸಹ ಸದಾ ನಮ್ಮ ಜೊತೆಯಲ್ಲಿದ್ದು ನೀವು ತೋರಿಸಿದ ದಾರಿಯಲ್ಲಿ ನಡೆಯುತ್ತಿರುವ
ಪತ್ನಿ : ಚನ್ನಮ್ಮ, ಮಕ್ಕಳು, ಮೊಮ್ಮಕ್ಕಳು, ಅಳಿಯ ಹಾಗು ಬಂಧುಗಳು.

## ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಸುವರ್ಣ ಮಹೋತ್ಸವ

ದಾವಣಗೆರೆ, ಜು. 5 - ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದ ವತಿಯಿಂದ ಬೆಂಗಳೂರಿನಲ್ಲಿ ದಿನಾಂಕ 8ರ ಶುಕ್ರವಾರ ಬೆಳಿಗ್ಗೆ 10 ಕ್ಕೆ ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಸುವರ್ಣ ಮಹೋತ್ಸವದಲ್ಲಿ ಭಾಗವಹಿಸಲು ಇಚ್ಛಿಸುವವರು ದಿನಾಂಕ 7ರ ಗುರುವಾರ ಬೆಳಿಗ್ಗೆ 10 ಗಂಟೆಯ ಒಳಗೆ ಸಂಘದಲ್ಲಿ ಹೆಸರು ನೋಂದಾಯಿಸುವುದು. ಹೆಸರು ಬರೆಸಿದವರು ದಿನಾಂಕ 8 ರಂದು ಬೆಳಿಗ್ಗೆ 5 ಗಂಟೆಗೆ ಸಂಘದ ಬಳಿ ಹಾಜರಾಗಲು ಕೋರಿದೆ.

# ಕರ್ಕಶ ಹಾರ್ನ್‌ಗಳ ಬಳಕೆ, ಅತಿ ವೇಗ ಕಡಿವಾಣಕ್ಕೆ ನಿಗಾ



**ದಾವಣಗೆರೆ, ಜೂ.6- ಇತ್ತೀಚಿನ ಕೆಲ ದಿನಗಳಿಂದ ದಾಳಿ ನಡೆಸಿ ಕರ್ಕಶ ಶಬ್ದ ಮಾಡುತ್ತಿದ್ದ 52 ಸೈಲೆನ್ಸರ್ ಪೈಪ್‌ಗಳನ್ನು ವಶಪಡಿಸಿಕೊಂಡಿದ್ದ ಪೊಲೀಸರು ಮಂಗಳವಾರ ಎಸ್ಪಿ ಕಚೇರಿ ಆವರಣದಲ್ಲಿ ನಾಶ ಮಾಡಿದರು.**

**(1ನೇ ಪುಟದಿಂದ)** ತಡೆಯುವುದರಿಂದ ಅಪಘಾತಗಳ ಸಂಖ್ಯೆ ಕಡಿಮೆ ಆಗಲಿದೆ ಎಂದರು.

ದಾವಣಗೆರೆ ಕೆಲ ಭಾಗಗಳಲ್ಲಿ ಮುಖ್ಯವಾಗಿ ಆಸ್ಪತ್ರೆಗಳಿರುವ ರಸ್ತೆ, ಸಂಪರ್ಕ ರಸ್ತೆಗಳಲ್ಲಿ ವಾಹನಗಳನ್ನು ಎಲ್ಲೆಂದರಲ್ಲಿ ನಿಲ್ಲಿಸುವಂತಹ 36 ಸ್ಥಳಗಳನ್ನು ಗುರುತಿಸಿ ಕ್ರಮ ಜರುಗಿಸಲಾಗುತ್ತಿದೆ. ಇತರೆ ಜಾಗ ಗುರುತು ಮಾಡಲಾಗುವುದು. ನಗರ ಪೊಲೀಸ್ ಉಪಾಧೀಕ್ಷಕರ ನೇತೃತ್ವದಲ್ಲಿ ನಗರದ ಎಲ್ಲ ಪೊಲೀಸ್ ಠಾಣೆ ಅಧಿಕಾರಿ ಮತ್ತು ಸಿಬ್ಬಂದಿಯನ್ನು ವಿಶೇಷವಾಗಿ ನೇಮಕ ಮಾಡಿ ಆಯಕಟ್ಟಿನ ಸ್ಥಳಗಳಲ್ಲಿ ಗಸ್ತು ಮಾಡಲಾಗುತ್ತಿದೆ.

ಪ್ರತಿ ದಿನ ಬೆಳಗ್ಗೆ 4 ರಿಂದ 8, ಸಂಜೆ 4 ರಿಂದ ರಾತ್ರಿ 11 ರ ವರೆಗೆ ಗಸ್ತು ನಡೆಸುವ ಮೂಲಕ ಅಪರಾಧ ತಡೆಗಟ್ಟುವಲ್ಲಿ ಶ್ರಮಿಸುತ್ತಿದ್ದಾರೆ ಎಂದು ತಿಳಿಸಿದರು.

ಶಾಲಾ-ಕಾಲೇಜು ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು ಚಾಲನಾ ಪರವಾನಿಗೆ ಪತ್ರ ಇಲ್ಲದೇ ಇದ್ದರೂ ಅನೇಕ ಕಡೆ ವೇಗವಾಗಿ ದ್ವಿಚಕ್ರ ಚಲಾಯಿಸುವುದು, ಹೆಲ್ಮೆಟ್ ಇಲ್ಲದೆ ಸಂಚರಿಸುವ ಬಗ್ಗೆ ಸಾಕಷ್ಟು ದೂರು ಕೇಳಿ ಬರುತ್ತಿವೆ. ಹಾಗಾಗಿ ಶಾಲಾ-ಕಾಲೇಜುಗಳ ಆರಂಭ ಮತ್ತು ಮುಕ್ತಾಯದ ಸಮಯದಲ್ಲಿ ನಿರ್ದಿಷ್ಟ ರಸ್ತೆ, ವೃತ್ತಗಳಲ್ಲಿ ಸಂಚಾರಿ ಪೊಲೀಸರು, ಅಧಿಕಾರಿಗಳನ್ನು ನಿಯೋಜನೆ ಮಾಡಲಾಗುವುದು ಎಂದು ಹೇಳಿದರು.

ಸಾರ್ವಜನಿಕ ಸುರಕ್ಷತಾ ನಿಯಮದ ಅನ್ವಯ 10 ಸಾವಿರಕ್ಕೂ ಅಧಿಕ ಅಂಗಡಿ, ಹೋಟೆಲ್, ವಾಣಿಜ್ಯ ಸಂಕೀರ್ಣ ಗಳಲ್ಲಿ ಸಿಸಿ ಟಿವಿ ಅಳವಡಿಸಲಾಗಿದೆ. ಎಲ್ಲಿ ಅಳವಡಿಸಿಲ್ಲವೋ ನೋಟಿಸ್ ನೀಡಲಾಗುವುದು. ನಂತರವೂ ಅಳವಡಿಸದಿದ್ದಲ್ಲಿ ಪ್ರಥಮ ಬಾರಿ 5, ಎರಡನೇ ಬಾರಿ 10 ಸಾವಿರ ದಂಡ ವಸೂಲಿ ಮಾಡಲಾಗುವುದು ಎಂದು ತಿಳಿಸಿದರು.

ರೌಡಿಶೀಟ್‌ನಲ್ಲಿ ಇರುವವರು ರಾತ್ರಿ ವೇಳೆಯಲ್ಲಿ ಗಲಾಟೆ ಮಾಡುತ್ತಿರುವ ಬಗ್ಗೆ ಕೇಳಿ ಬರುತ್ತಿದೆ. ಮತ್ತೊಮ್ಮೆ ರೌಡಿ ಪರೇಡ್ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಬಾಡ ಕ್ರಾಸ್‌ನಲ್ಲಿ ಮಂಗಳಮುಖಿಯರ ಹಾವಳಿ ಹೆಚ್ಚಾಗಿದೆ ಎಂಬುದರ ಬಗ್ಗೆ ಮಾಹಿತಿ ಇದೆ. ಈಗಾಗಲೇ ಮೊಕದ್ದಮೆ ದಾಖಲಿಸುವುದಾಗಿ ತಿಳಿ ಹೇಳಲಾಗಿದೆ. ಎಲ್ಲಿಯೇ ಆಗಲಿ ಬಲವಂತದಿಂದ ಹಣ ವಸೂಲಿ, ದೌರ್ಜನ್ಯ ಮಾಡುವುದು ಕಂಡು ಬಂದಲ್ಲಿ ತತ್‌ಕ್ಷಣಕ್ಕೆ ದೂರು ಸಲ್ಲಿಸಬೇಕು ಎಂದರು.

## ಪೈಲೆಟ್ ಯೋಜನೆ ಜಾರಿ

**(1ನೇ ಪುಟದಿಂದ)** ಗೇಟ್‌ನಲ್ಲಿ ನಿಯಂತ್ರಣ ಕೇಂದ್ರ ಪ್ರಾರಂಭಿಸಿ, ಪ್ರತಿ ವಾಹನದ ಚಲನೆ ಬಗ್ಗೆ ನಿಗಾ ವಹಿಸಲಾಗುತ್ತಿದೆ. ನಿಯಮ ಉಲ್ಲಂಘನೆ ಮಾಡಿದ ವಾಹನಗಳಿಗೆ ದಂಡ ವಿಧಿಸಲಾಗುವುದು. ಈವರೆಗೆ 1 ಸಾವಿರಕ್ಕೂ ಹೆಚ್ಚು ವಾಹನಗಳಿಂದ ದಂಡ ವಸೂಲಿ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ತುಮಕೂರು, ಹಾವೇರಿ, ಬೆಂಗಳೂರು ಜಿಲ್ಲೆಯಲ್ಲಿ ಪೈಲಟ್ ಯೋಜನೆ ವಿಸ್ತರಣೆ ಆಗಲಿದೆ ಎಂದು ಮಾಹಿತಿ ನೀಡಿದರು.

# ಹರಿಹರದಲ್ಲಿ 9ರಂದು ರೋಡ್ ರೇಸ್ ಸ್ಪರ್ಧೆ




ಹರಿಹರ, ಜೂ. 5 - ನಗರದ ಕ್ರೀಡಾ ಪಟುಗಳಿಗೆ ಪ್ರೋತ್ಸಾಹ ನೀಡಬೇಕು ಎಂಬ ಉದ್ದೇಶದಿಂದ ಮಂಜಣ್ಣ ಕ್ರೀಡಾ ಸಮಿತಿಯ ವತಿಯಿಂದ ಮಂಜಣ್ಣನವರ ಹುಟ್ಟು ಹಬ್ಬದ ಪ್ರಯುಕ್ತ ಪ್ರಥಮ ಬಾರಿಗೆ ರಾಜ್ಯ ಮಟ್ಟದ ರೋಡ್ ರೇಸ್ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಆಕಾರ್ ರಾಮು ತಿಳಿಸಿದರು.

ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ನಗರದ ಮಂಜಣ್ಣನವರು ಹುಬ್ಬಳ್ಳಿಯ ರೈಲ್ವೆ ಇಲಾಖೆಯ ನೌಕರರಾಗಿದ್ದ ಸಮಯದಲ್ಲಿ ನಗರದ ಹಲವಾರು ಕ್ರೀಡಾ ಪಟುಗಳಿಗೆ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ನೀಡುತ್ತಾ ಬಂದು ಇತ್ತೀಚೆಗೆ ನಿಧನರಾಗಿದ್ದರು. ಅವರ ಹುಟ್ಟು ಹಬ್ಬದ ಸಮಯದಲ್ಲಿ ಕ್ರೀಡಾ ಪಟುಗಳಿಗೆ ಅನುಕೂಲ ಮಾಡುವ ದೃಷ್ಟಿಯಿಂದ ದಿ. 9 ರಂದು ಶನಿವಾರ ರಾಜ್ಯ ಮಟ್ಟದ ರೋಡ್ ರೇಸ್ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಕ್ರೀಡೆಗೆ ಚಾಲನೆಯನ್ನು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ರಿಷ್ಯಂತ್ ಸೇರಿದಂತೆ ಸ್ಥಳೀಯ ರಾಜಕೀಯ ಪಕ್ಷಗಳ ಮುಖಂಡರ ನೇತೃತ್ವದಲ್ಲಿ ಚಾಲನೆ ನೀಡಲಾಗುತ್ತದೆ.

ಸಮಿತಿಯ ಅಧ್ಯಕ್ಷ ಮಂಜುನಾಥ್, ಕಾರ್ಯದರ್ಶಿ ಶಿವಕುಮಾರ್, ದೀಪಕ್ ಮತ್ತಿತರರು ಹಾಜರಿದ್ದರು.

# ನ್ಯಾಮತಿ : ತಹಶೀಲ್ದಾರ್ ಕಚೇರಿಗೆ ಜಿಲ್ಲಾಧಿಕಾರಿ ಭೇಟಿ

ನ್ಯಾಮತಿ, ಜು.5- ಜಿಲ್ಲಾಧಿಕಾರಿ ಮಹಂತೇಶ್ ಬೀಳಗಿ ಮಂಗಳವಾರ ನ್ಯಾಮತಿ ಪಟ್ಟಣದ ತಹಶೀಲ್ದಾರ್ ಕಚೇರಿಗೆ ಭೇಟಿ ನೀಡಿ ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಿದರು.



ತಿಂಗಳಿನ ಪ್ರತಿ ಮಂಗಳವಾರ ಜಿಲ್ಲೆಯ ತಹಶೀಲ್ದಾರ್ ಕಚೇರಿಗೆ ಭೇಟಿ ನೀಡಬೇಕು ಎಂಬ ಆದೇಶವಿದ್ದ ಹಿನ್ನೆಲೆಯಲ್ಲಿ ಭೇಟಿ ನೀಡಲಾಗಿದೆ. ಜಿಲ್ಲಾಧಿಕಾರಿಗಳ ಭೇಟಿಯಿಂದ ಕಚೇರಿಯಲ್ಲಿನ ಮಧ್ಯವರ್ತಿಗಳ ಕಾಟ ಮತ್ತು ಸಾರ್ವಜನಿಕರ ಸಮಸ್ಯೆಗಳು ಸರಳವಾಗಿ ವಿಲೇವಾರಿ ಮಾಡಬಹುದು ಎಂದರು.

ತಾಲ್ಲೂಕಿನ ವಿವಿಧ ಗ್ರಾಮಗಳ ಜನರು ತಮ್ಮ ಸಮಸ್ಯೆಗಳನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು.

ವಿನಾಕಾರಣ ಸಾರ್ವಜನಿಕರನ್ನು ಕಚೇರಿಗೆ ಅಲೆದಾಡಿಸದೇ, ಸಮಸ್ಯೆಗಳ ತಕ್ಷಣವೇ ವಿಲೇವಾರಿ ಮಾಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಎಂ.ರೇಣುಕ, ಬಿ.ಒ. ಮಂಜುನಾಥ್, ಇಒ ರಾಮಭೋವಿ, ಕಂದಾಯ ಇಲಾಖೆಯ ಸುಧೀರ್, ಸಂತೋಷ್, ಹರೀಶ್, ಸಮುದಾಯ ಆಸ್ಪತ್ರೆಯ ವೈದ್ಯಾಧಿಕಾರಿ ರೇಣುಕಾ ಎಂ ಮೇಣಸಿನಕಾಯಿ, ಪ.ಪಂ. ಮುಖ್ಯಾಧಿಕಾರಿ ಬಿ.ಕೆ.ಕೊಟ್ರೇಶ್ ಸೇರಿದಂತೆ ಇತರರಿದ್ದರು.

# ಮಲೇಬೆನ್ನೂರು ಪುರಸಭೆ ಸಿಓ ಆಗಿ ಉಮೇಶ್ ಅಧಿಕಾರ ಸ್ವೀಕಾರ



ಮಲೇಬೆನ್ನೂರು, ಜು.6- ಇಲ್ಲಿನ ಪುರಸಭೆಯ ನೂತನ ಮುಖ್ಯಾಧಿಕಾರಿಯಾಗಿ ಉಮೇಶ್ ಅವರು ಸೋಮವಾರ ಪ್ರಭಾರ ಮುಖ್ಯಾಧಿಕಾರಿ ಗಣೇಶ್ ರಾವ್ ಅವರಿಂದ ಅಧಿಕಾರ ವಹಿಸಿಕೊಂಡರು. ಈ ವೇಳೆ ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬಿ.ಮಂಜುನಾಥ್, ಮುಖಂಡರಾದ ಕೆ.ಪಿ. ಗಂಗಾಧರ್, ಬಿ.ಸುರೇಶ್, ಜಿಗಳೇರ ಮಂಜಣ್ಣ, ಓ.ಜಿ. ಕುಮಾರ್ ಹಾಗೂ ಪುರಸಭೆ ಅಧಿಕಾರಿಗಳು ಹಾಜರಿದ್ದರು.

ಇದೇ ವೇಳೆ ಕಛೇರಿ ವ್ಯವಸ್ಥಾಪಕರಾಗಿ ಏಕನಾಥ್ ಅವರು ಅಧಿಕಾರ ವಹಿಸಿಕೊಂಡರು. ಪ್ರಭಾರ ಮುಖ್ಯಾಧಿಕಾರಿ ಹಾಗೂ ಕಛೇರಿ ವ್ಯವಸ್ಥಾಪಕರಾಗಿದ್ದ ಗಣೇಶ್ ರಾವ್ ಅವರನ್ನು ವರ್ಗಾವಣೆ ಮಾಡಲಾಗಿದೆ.

# ಸಾಲಕ್ಕಾಗಿ ಸಭೆ ನಡೆಸಲು ಶ್ರೀಲಂಕಾ ನಿರ್ಧಾರ

ಕೊಲಂಬೊ, ಜು. 5 - ಭಾರತ, ಚೀನ ಹಾಗೂ ಜಪಾನ್ ಸೇರಿದಂತೆ ಹಲವು ದೇಶಗಳಿಂದ ಸಾಲ ಪಡೆಯಲು ದಾನಿಗಳ ಸಮಾವೇಶ ನಡೆಸಲು ಶ್ರೀಲಂಕಾ ನಿರ್ಧರಿಸಿದೆ.

ಏಕರೂಪದ ಒಪ್ಪಂದದ ಮೂಲಕ ಸಾಲ ನೆರವು ಪಡೆಯುವ ಸಲುವಾಗಿ ಸಮಾವೇಶ ಆಯೋಜಿಸಲಾಗುವುದು ಎಂದು ಶ್ರೀಲಂಕಾ ಪ್ರಧಾನ ಮಂತ್ರಿ ರಾಣಿಲ್ ವಿಕ್ರಮಸಿಂಘೆ ಹೇಳಿದ್ದಾರೆ. ನಾವು ಆಹಾರದ ಸಮಸ್ಯೆ ಸಹ ಎದುರಿಸುತ್ತಿದ್ದೇವೆ. ಇಂಧನದ ಕೊರತೆಯೂ ಇದೆ. ಆಹಾರದ ಬೆಲೆ ಏರಿಕೆಯಾಗಿದೆ ಎಂದವರು ಹೇಳಿದ್ದಾರೆ. ಜಾಗತಿಕ ಬಿಕ್ಕಟ್ಟಿನ ಕಾರಣದಿಂದಾಗಿ ನಮ್ಮ ಪರಿಸ್ಥಿತಿ ಬಾಣಲೆಯಿಂದ ಬೆಂಕಿಗೆ ಬಿದ್ದಂತಾಗಿದೆ. ಇತರೆ ದೇಶಗಳೂ ಸಹ ಸಮಸ್ಯೆ ಎದುರಿಸುತ್ತಿವೆ. ಭಾರತವೂ ಜಾಗತಿಕ ಸಮಸ್ಯೆ ಎದುರಿಸುತ್ತಿದ್ದು, ಅದು ನೀಡಬಹುದಾದ ಸಾಲಕ್ಕೆ ಮಿತಿ ಇದೆ ಎಂದು ವಿಕ್ರಮಸಿಂಘೆ ತಿಳಿಸಿದ್ದಾರೆ.

# ಜೈನ್ ಲೇಔಟ್ ನಲ್ಲಿ ಪರಿಸರ ದಿನಚರಣೆ



ದಾವಣಗೆರೆ, ಜು. 5 - ಜೈನ ಲೇಔಟ್ ನಲ್ಲಿ ಪರಿಸರ ದಿನಾಚರಣೆ ಆಚರಿಸಲಾಯಿತು ವಾರ್ಡಿನ ಕೌನ್ಸಿಲರ್ ಆಶಾ ಉಮೇಶ್‌ರವರು ಗಿಡವನ್ನು ನೆಟ್ಟು ಚಾಲನೆ ಮಾಡಿದರು. ಪರಿಸರದ ಬಗ್ಗೆ ಜ್ಯೋತಿ ಹಾಗೂ ಶಶಿಕಲಾ ಬಡದಾಳ ಮಾತನಾಡಿದರು. ಲೇಔಟ್‌ನ ಎಲ್ಲಾ ಮಹಿಳೆಯರು ಉಪಸ್ಥಿತರಿದ್ದರು

# ನಗರದಲ್ಲಿ ಇಂದು ಚಂಡಿಕಾ ಹೋಮ



ಪಿ. ಹಾಲೇಶಪ್ಪ ರಸ್ತೆಯಲ್ಲಿರುವ ಶ್ರೀ ಉತ್ಸವಾಂಭ ದೇವಿ ಭಕ್ತ ಮಂಡಳಿ ವತಿಯಿಂದ ಇಂದು ಶ್ರೀ ಉತ್ಸವಾಂಭ ದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಆದಿಶಕ್ತಿದೇವಿ, ಶ್ರೀ ಗಣೇಶ, ಶ್ರೀ ಮಹಾಲಕ್ಷ್ಮಿ ದೇವಿ ದೇವರುಗಳ ಸಾಮೂಹಿಕ ಚಂಡಿ ಹೋಮ ನಡೆಯಲಿದೆ. ಇದೇ ದಿನಾಂಕ 11 ರಿಂದ 27 ರ ಶನಿವಾರದವರೆಗೆ 48 ದಿನಗಳ ಕಾಲ ಮಹಾಮಂಡಲಾಭಿಷೇಕ ನಡೆಯಲಿದೆ.

**ಭಾವಪೂರ್ಣ ಶ್ರದ್ಧಾಂಜಲಿ**



ಮಹೇಶ್ ಇಂಡಸ್ಟ್ರೀಸ್ ಮಾಲೀಕರೂ, ನಮ್ಮ ಆತ್ಮೀಯರೂ ಆದ
**ಬಿಸಲೇರಿ ವಿರುಪಾಕ್ಷಿ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.
**ಎನ್.ಎ.ಗಿರೀಶ್**
ಎನ್.ಆದಪ್ಪ ಅಂಡ್ ಸನ್ಸ್ ಮತ್ತು ಕುಟುಂಬ ವರ್ಗದವರು
ಬೆಳ್ಳೂಡಿ ಗಲ್ಲಿ, ದಾವಣಗೆರೆ.
**ಎನ್.ಅಡಿವೆಪ್ಪ ಮತ್ತು ಮಕ್ಕಳು,**
ಚೇತನ ಎಂಟರ್‌ಪ್ರೈಸಸ್, ಈರುಳ್ಳಿ ಮಾರುಕಟ್ಟೆ, ದಾವಣಗೆರೆ.

**ಹೊಸಮನೆ ಸಿದ್ದಪ್ಪ ನಿಧನ**



ಹಿರೇಕೋಗಲೂರು ಗ್ರಾಮದ ವಾಸಿ ಹೊಸಮನೆ ವೀರಭದ್ರಪ್ಪ ಇವರ ಸಹೋದರರಾದ
**ಹೊಸಮನೆ ಸಿದ್ದಪ್ಪ**
ಅವರು ದಿನಾಂಕ 05.07.2022ರ ಮಂಗಳವಾರ ಸಂಜೆ 5.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 65 ವರ್ಷ ವಯಸ್ಸಾಗಿತ್ತು.
ಪತ್ನಿ, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 06.07.2022ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಹಿರೇಕೋಗಲೂರು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.
**ಇಂತಿ ದುಃಖ ತಪ್ತ ಕುಟುಂಬವರ್ಗ**
**ವೀಣಾ ಜಗದೀಶ್, ಮೊ: 97423 45771**

**ನಮ್ಮ ಪ್ರೀತಿಯ ತಂದೆ-ತಾಯಿಯವರ ಪುಣ್ಯಸ್ಮರಣೆ**



ನೇತ್ರದಾನಿ ಹಾಗೂ ದೇಹದಾನಿ
**ದಿ|| ಕಕ್ಕರಗೊಳ್ಳದ ಅಲ್ದಿ ಕೊಟ್ರಪ್ಪನವರು**
(ಕೆ.ಎ.ಕೊಟ್ರಪ್ಪ)
8ನೇ ವರ್ಷದ ಪುಣ್ಯಸ್ಮರಣೆ
ನಿಧನ: 6.07.2014



**ದಿ|| ಕಕ್ಕರಗೊಳ್ಳದ ಅಲ್ದಿ ರತ್ನಮ್ಮನವರು**
(ಕೆ.ಎ.ರತ್ನಮ್ಮ)
ಪ್ರಥಮ ವರ್ಷದ ಪುಣ್ಯಸ್ಮರಣೆ
ನಿಧನ: 8.06.2021

*ಸದಾ ನಿಮ್ಮ ಸ್ಮರಣೆ ಹಾಗೂ ಆದರ್ಶ ಮತ್ತು ಮಾರ್ಗದರ್ಶನ ಪಾಲಿಸುತ್ತಿರುವ ನಮಗೆ ನಿಮ್ಮ ಆಶೀರ್ವಾದ ಸದಾ ಇರಲಿ...*

**ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**
ಎಸ್.ಎಸ್. ಲೇಔಟ್ 'ಬಿ' ಬ್ಲಾಕ್, ದಾವಣಗೆರೆ.

|| ಶ್ರೀ ಶಿವನಾರದಮುನಿ ಪ್ರಸನ್ನ ||
**ಕೈಲಾಸ ಶಿವಗಣಾರಾಧನೆ**



ದಾವಣಗೆರೆ ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದ ವಾಸಿಗಳಾದ
**ಶ್ರೀ ಕೆ. ಮಲ್ಲಿಕಾರ್ಜುನಪ್ಪ ಮತ್ತು ಸಹೋದರರು** ಮಾಡುವ ವಿಜ್ಞಾಪನೆಗಳು.
ದಿನಾಂಕ 28.6.2022ನೇ ಮಂಗಳವಾರ ಬೆಳಿಗ್ಗೆ 9.30ಕ್ಕೆ ನನ್ನ ಅಣ್ಣನವರಾದ
**ಶರಣ ಕೆ. ಬಸಪ್ಪ**
(ದಿ. ಶ್ರೀಮತಿ ಬಸಮ್ಮ ಇವರ ಪೂಜ್ಯ ಪತಿ) ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 6.7.2022ನೇ ಬುಧವಾರ ಬೆಳಿಗ್ಗೆ 11.30 ಗಂಟೆಗೆ ದಾವಣಗೆರೆ ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದಲ್ಲಿರುವ ಶರಣ ಬಸವೇಶ್ವರ ಸಮುದಾಯ ಭವನದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು: ಶ್ರೀ ಕೆ. ಮಲ್ಲಿಕಾರ್ಜುನಪ್ಪ ಮತ್ತು ಸಹೋದರರು, ಶ್ರೀ ಕೆ.ಬಿ. ಪ್ರಕಾಶ್ ಮತ್ತು ಸಹೋದರರು, ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಕಡ್ಲೇಬಾಳು ವಂಶಸ್ಥರು, ಬಿ.ಕಲಪನಹಳ್ಳಿ ಗ್ರಾಮಸ್ಥರು ಹಾಗು ಬಂಧು-ಮಿತ್ರರು.
**ಮೊ: 89715 73643**

# ಎಆರ್‌ಜಿ ಕಾಲೇಜಿನಲ್ಲಿ ಗಮನ ಸೆಳೆದ 'ಅರ್ಥೋತ್ಸವ'

ದಾವಣಗೆರೆ, ಜು. 5- ನಗರದ ಎ.ಆರ್.ಜಿ. ಕಲಾ ಮತ್ತು ವಾಣಿಜ್ಯ ಕಾಲೇಜಿನ ಅರ್ಥಶಾಸ್ತ್ರ ವಿಭಾಗದಿಂದ 'ಅರ್ಥೋತ್ಸವ' ಆರ್ಥಿಕ ಮಾದರಿಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಮೂರು ದಿನಗಳ ಕಾಲ ನಡೆಯುವ ಈ ಕಾರ್ಯಕ್ರಮದಲ್ಲಿ ಅರ್ಥಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಸಮಾಜ ಮುಖಿ ಮಾದರಿಗಳನ್ನು ಪ್ರದರ್ಶಿಸಿದರು.

ಮೇಕಿಂಗ್ ಇಂಡಿಯಾದ ಬಗ್ಗೆ ತಿಳಿಸಿಕೊಡುವ 'ಸ್ಥಳೀಯ ಮಾರುಕಟ್ಟೆ', ಉದ್ಯೋಗ ಕೊರತೆ ನೀಗಿರುವ 'ಗ್ರಾಮೀಣ ಭಾಗದ ಉದ್ಯೋಗ', 'ಪಶು ಸಂಗೋಪನೆ', 'ಸ್ಮಾರ್ಟ್ ಸಿಟಿ ಯೋಜನೆಗಳು', 'ಸಾವಯವ ಕೃಷಿ ಪದ್ಧತಿ'ಯ ಉಪಯೋಗ,' 'ಸೇವಾ ವಲಯ', 'ಪ್ರಾಥಮಿಕ ವಲಯ', 'ಹಸಿರು ಕ್ರಾಂತಿ', ಹಿಂದಿನ ಕಾಲದ 'ವಸ್ತು ವಿನಿಮಯ ಪದ್ಧತಿ', 'ಬ್ಯಾಂಕಿಂಗ್ ವಲಯ'ದ ಕಾರ್ಯ ನಿರ್ವಹಣೆ, 'ಜಿಲ್ಲಾಡಳಿತ ಭವನ'ದ ಮಾದರಿ ಹಾಗೂ ಕಾರ್ಯನಿರ್ವಹಣೆ ಮಾದರಿಗಳ ಪ್ರದರ್ಶನಗಳು ಗಮನ ಸೆಳೆದವು.

ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಕಾಲೇಜು ಪ್ರಾಂಶುಪಾಲ ಪ್ರೊ.ಕೆ.ಎಸ್. ಬಸವರಾಜಪ್ಪ, ವಿದ್ಯಾರ್ಥಿಗಳು ಪದವಿ ಪಡೆದು ಉದ್ಯೋಗ ನಿರೀಕ್ಷಿಸುವ ಬದಲು ಸ್ವಾಲವಂಬಿ ಜೀವನ ನಡೆಸಲು ಹಾಗೂ ಬೇರೆ ಬೇರೆ ವಲಯಗಳಲ್ಲಿ ಗುರುತಿಸಿಕೊಳ್ಳಲು ಇಂತಹ ಪ್ರಾತ್ಯಕ್ಷಿಕೆಗಳು ಸಹಕಾರಿಯಾಗಿವೆ ಎಂದು ಹೇಳಿದರು.

ನೈಸರ್ಗಿಕ ಸಂಪನ್ಮೂಲಗಳನ್ನೇ ಬಳಸಿಕೊಂಡು ವಿದ್ಯಾರ್ಥಿಗಳು ಮಾದರಿಗಳನ್ನು ತಯಾರಿಸಿದ್ದಾರೆ. ಅವರ ಬುದ್ಧಿವಂತಿಕೆ, ಪರಿಶ್ರಮವು ಪ್ರಾಯೋಗಿಕ ಮನಸ್ಥಿತಿಯ ಪ್ರತಿಫಲವಾಗಿದೆ ಎಂದು ಶ್ಲಾಘಿಸಿದರು.



ವಿದ್ಯಾರ್ಥಿಗಳು ಕೇವಲ ಪುಸ್ತಕಗಳ ಹುಳುಗಳಾಗದೆ, ಇಂತಹ ವಿಚಾರಗಳ ಕಡೆ ಗಮನ ಹರಿಸಬೇಕು. ಇದು ಸ್ವಾವಲಂಬಿ ಬದುಕಿಗೆ ಅಡಿಪಾಯವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಉದ್ಯೋಗ ಸಿಗುತ್ತಿಲ್ಲ ಎಂದು ಕೊರಗುವವರೇ ಹೆಚ್ಚಾಗುತ್ತಿದ್ದಾರೆ. ಆದರೆ ಇಂತಹ ಪ್ರಾತ್ಯಕ್ಷಿಕೆಗಳಲ್ಲಿ ಭಾಗವಹಿಸಿದರೆ ಸ್ವ-ಉದ್ಯೋಗಿಗಳಾಗುವ ಹುಮ್ಮಸ್ಸು, ಆತ್ಮವಿಶ್ವಾಸ, ಧೈರ್ಯ ಹೆಚ್ಚಾಗುತ್ತದೆ ಎಂದು ಹೇಳಿದ ಅವರು, ದಾವಣಗೆರೆಯ ಇತರೆ ಕಾಲೇಜು ವಿದ್ಯಾರ್ಥಿಗಳಿಗೂ ಈ ಕಾರ್ಯಕ್ರಮ ಮಾದರಿಯಾಗಿದೆ ಎಂದರು.

ಇತಿಹಾಸ ವಿಭಾಗದ ಸಹ ಪ್ರಾಧ್ಯಾಪಕ ಡಾ.ಜೆ.ಕೆ. ಮಲ್ಲಿಕಾರ್ಜುನಪ್ಪ, ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಪ್ರೊ.ಜೆ. ಅನಿತಾಕುಮಾರಿ, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಹೆಚ್.ಆರ್. ತಿಪ್ಪೇಸ್ವಾಮಿ, ಸಮಾಜ ಶಾಸ್ತ್ರ ವಿಭಾಗದ ರಮೇಶ್ ಪೂಜಾರ್, ವಾಣಿಜ್ಯ ಶಾಸ್ತ್ರ ವಿಭಾಗದ ರಶ್ಮಿ ಪಿ., ಅರ್ಥಶಾಸ್ತ್ರ ವಿಭಾಗದ ಉಪನ್ಯಾಸಕಿ ಕು.ಸಲ್ಮಾ, ಜಯಪ್ರಕಾಶ್, ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಮುಖ್ಯಸ್ಥ ಡಾ.ಚಮನ್ ಸಾಬ್ ಎಂ. ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಹರಿಹರ: ಪೌರ ಕಾರ್ಮಿಕರ ಧರಣಿ



ಹರಿಹರ, ಜು. 5 - ನೇರ ಪಾವತಿ ಪೌರ ಕಾರ್ಮಿಕರು, ಒಳ ಚರಂಡಿ ಸಹಾಯ ಕರು, ವಾಲ್ವ್‌ಮ್ಯಾನ್, ವಾಹನ ಚಾಲಕರು, ಲೋಡರ್ಸ್ ಕ್ಲೀನರ್ಸ್, ಹೆಲ್ಪರ್‌ಗಳು, ಸ್ಮಶಾನ ಕಾವಲುಗಾರ ಸೇರಿದಂತೆ ಇತರೆ ಪೌರ ಕಾರ್ಮಿಕರ ಗುತ್ತಿಗೆ ಪದ್ಧತಿಯನ್ನು ರದ್ದುಪಡಿಸಿ, ನೌಕರಿ ಖಾಯಂಗೊಳಿಬೇಕು ಎಂದು ನಗರಸಭೆ ಪೌರ ಕಾರ್ಮಿಕರು ಕರ್ತವ್ಯಕ್ಕೆ ಹಾಜರಾಗದೇ ನಗರಸಭೆಯ ಮುಂಭಾಗದಲ್ಲಿ ಧರಣಿ ನಡೆಸಿದರು.

ಈ ವೇಳೆ ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ಸದಾಶಿವ ಪೈಲ್ವಾನ್ ಮಾತನಾಡಿ ನಗರಸಭೆ, ಪಟ್ಟಣ ಪಂಚಾಯತಿ, ಪುರಸಭೆ ಸೇರಿದಂತೆ ಇತರೆ ಇಲಾಖೆಗಳಲ್ಲಿ ಸ್ವಚ್ಛತಾ ಕಾರ್ಯ ಮಾಡುತ್ತಿರುವ ಕಾರ್ಮಿಕರ ಬದುಕು ಶೋಚನೀಯವಾಗಿದೆ ಎಂದು ಹೇಳಿದರು.

ನಾವೆಲ್ಲರೂ ಕೊರೊನಾ ಸೋಂಕು, ಲಾಕ್ ಡೌನ್ ನಂತಹ ಕಷ್ಟದ ಕಾಲದಲ್ಲಿ ನಿರಂತರವಾಗಿ ಜನರ ಸೇವೆ ಮಾಡುತ್ತ ಬಂದಿದ್ದೇವೆ. ಆದರೆ, ನಮಗೆ ಮಾಸಿಕ ವೇತನದಲ್ಲಿ ತಾರತಮ್ಯ, ವಸತಿ ಸೌಲಭ್ಯದಲ್ಲಿ ತಾರತಮ್ಯ ಇದೆ. ಅನೈರ್ಮಲ್ಯ ವೃತ್ತಿ ಮಾಡುತ್ತಿದ್ದರು ಸೂಕ್ತ ವೈದ್ಯಕೀಯ ಸೌಲಭ್ಯಗಳ ಕೊರತೆ ಜೊತೆಗೆ ಸುರಕ್ಷತೆ ಇಲ್ಲ ಎಂದು ಹೇಳಿದರು.


ಪೌರ ಕಾರ್ಮಿಕರಿಗೆ ರಜೆ ಇಲ್ಲ, ಕನಿಷ್ಟ ಹೆರಿಗೆ ರಜೆ ಮತ್ತು ಹೆರಿಗೆ ಭತ್ಯೆ ನೀಡಿರುವುದಿಲ್ಲ. ಬೆಳಿಗ್ಗೆ 5 ರಿಂದ ಕೆಲಸ ಆರಂಭಿಸುವ ನಮಗೆ ಕುಡಿಯುವ ನೀರು, ವಿಶ್ರಾಂತಿ ಗೃಹ, ಶೌಚಾಲಯ ವ್ಯವಸ್ಥೆ ಇರುವುದಿಲ್ಲ. 60 ವರ್ಷ ಕೆಲಸ ಮಾಡಿ ನಿವೃತ್ತಿ ಹೊಂದಿದ ಕಾರ್ಮಿಕರಿಗೆ ನಿವೃತ್ತಿ ಸೌಕರ್ಯಗಳು ಇಲ್ಲದೇ ಬರಿಕೈಯಲ್ಲಿ ಮನೆಗೆ ಹೋಗಬೇಕು ಎಂದು ಹೇಳಿದರು.

ನಮ್ಮ ವಿವಿಧ ರೀತಿಯ 7 ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಮುಂದಾಗಬೇಕು. ಅಲ್ಲಿಯವರೆಗೆ ನಗರಸಭೆಯ 59 ನೇರ ಪಾವತಿ ನೌಕರರು ಒಟ್ಟು ಕೆಲಸವನ್ನು ಸ್ಥಗಿತಗೊಳಿಸಿ ಮುಷ್ಕರದಲ್ಲಿ ಪಾಲ್ಗೊಂಡಿರುವುದಾಗಿ ಹೇಳಿದರು.

ಜಿಲ್ಲಾ ಅಧ್ಯಕ್ಷ ರಮೇಶ್ ಮಾತನಾಡಿದರು.

ಈ ಸಂದರ್ಭದಲ್ಲಿ ನಗರ ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ಎಂ. ರವಿ, ಗುರುಮೂರ್ತಿ, ಚಂದ್ರಪ್ಪ ಆರ್. ಯಮನೂರು, ವಿಶ್ವನಾಥ್, ಹನುಮಂತಪ್ಪ, ಭರ್ಮಪ್ಪ, ಪರಸಪ್ಪ, ಸೋಮನಾಥ, ದಯಾನಂದ, ಪರಮೇಶ್ವರಪ್ಪ, ಬಸಣ್ಣ, ಕುಮಾರ್, ಕರಿಯಪ್ಪ, ಪರಸಪ್ಪ, ಉಚ್ಚೆಂಗಪ್ಪ, ಮರಿದೇವಪ್ಪ, ನೀಲಪ್ಪ, ನಾಗರಾಜ್, ರಾಘವೇಂದ್ರ, ಜೆಸಿಬಿ, ಹೆಚ್.ಪಿ. ರಾಘವೇಂದ್ರ, ಉಷಾ, ಭಾಗ್ಯಮ್ಮ, ಉಚ್ಚೆಂಗಮ್ಮ, ಮಹೇಶ್, ಮಂಜುನಾಥ್, ರವಿ.ಎಂ. ಹನುಮಂತಪ್ಪ, ವಿನಾಯಕ, ಪ್ರದೀಪ್, ಧನಂಜಯ್ ಮತ್ತಿತರರು ಹಾಜರಿದ್ದರು.

## ಐರಣಿ ಹೊಳೆಮಠ ಮಹಾಸಂಸ್ಥಾನದ ಶಾಖಾಮಠದಲ್ಲಿ ಗುರುಪೂರ್ಣಿಮೆ



ದಾವಣಗೆರೆ, ಜು. 5- ನಗರದ ಶ್ರೀ ದುರ್ಗಾಂಬಿಕ ದೇವ ಸ್ಥಾನದ ಹತ್ತಿರವಿರುವ ಐರಣಿ ಹೊಳೆಮಠ ಮಹಾಸಂಸ್ಥಾನ ಶಾಖಾ ಮಠದಲ್ಲಿ ಇದೇ ದಿನಾಂಕ 11 ರಿಂದ 13 ರವರೆಗೆ ಗುರು ಪೂರ್ಣಿಮೆ ಹಾಗೂ ಶಾಖಾ ಮಠದ 15 ನೇ ವಾರ್ಷಿಕೋತ್ಸವ ಹಮ್ಮಿಕೊಳ್ಳಲಾಗಿದೆ.

ಇದೇ ದಿನಾಂಕ 11 ರಂದು ಸೋಮ ವಾರದಿಂದ 13 ರ ಬುಧವಾರದವರೆಗೆ ಸತ್ಸಂಗ, ಭಜನೆ, ಪ್ರವಚನ ಕಾರ್ಯ ಕ್ರಮಗಳು ಜರುಗುವವು. ಶ್ರೀ ಸದ್ಗುರು ಬಸವರಾಜ ದೇಶಿಕೇಂದ್ರ ಮಹಾ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ವಿನೋಬನಗರ ಶ್ರೀ ಜಡೇ ಸಿದ್ದೇಶ್ವರ ಮಠದ ಶಿವಾನಂದ ಸ್ವಾಮಿಗಳು ಉಪನ್ಯಾಸ ನೀಡಲಿದ್ದಾರೆ.

13 ರಂದು ಬುಧವಾರ ಅಖಂಡ ಗುರು ಭಜನೆ, ಪಂಚಾಮೃತ ಅಭಿಷೇಕ, ಕೈಲಾಸ ಮಹಾಪೂಜೋತ್ಸವ ದರ್ಶನ, ಮಹಾಮಂಗಳಾರತಿ, ಮಹಾಪ್ರಸಾದ ನಡೆಯಲಿದೆ. ರಾಣೇಬೆನ್ನೂರು ತಾಲ್ಲೂಕು ನಾಗೇನಹಳ್ಳಿ ಭಜನಾ ಮಂಡಳಿ ಯವರು ಅಖಂಡ ಭಜನೆ ನಡೆಸಿಕೊಡಲಿದ್ದಾರೆ.

# ತತ್ವಜ್ಞಾನದಿಂದ ಬದುಕು ಪರಿಪೂರ್ಣ

## ಶರಣ ಸಂಗಮ ಕಾರ್ಯಕ್ರಮದಲ್ಲಿ ಶ್ರೀ ಬಸವಪ್ರಭು ಸ್ವಾಮೀಜಿ

ದಾವಣಗೆರೆ, ಜು. 5- ವಿಜ್ಞಾನ ತಂತ್ರಜ್ಞಾನದ ಆಚೆಗೆ ತತ್ತ್ವ ಜ್ಞಾನ ವಿದೆ. ಈ ತತ್ವಜ್ಞಾನವು ನಮ್ಮ ಬದುಕನ್ನು ಪರಿಪೂರ್ಣಗೊಳಿಸುತ್ತದೆ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.

ಬಸವಕೇಂದ್ರ ಶ್ರೀ ಮುರುಘರಾಜೇಂದ್ರ ವಿರಕ್ತಮಠ, ಶ್ರೀ ಜಗದ್ಗುರು ಮುರುಘ ರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ವತಿಯಿಂದ ನಗರದ ಶಿವಯೋಗಾಶ್ರಮದಲ್ಲಿ ಭಾನುವಾರ ಸಂಜೆ ಹಮ್ಮಿಕೊಳ್ಳಲಾಗಿದ್ದ ಶರಣ ಸಂಗಮ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ವಿಜ್ಞಾನ ಹಾಗೂ ತಂತ್ರಜ್ಞಾನಗಳು ಭೌತಿಕ ಜ್ಞಾನವಾದರೆ ತತ್ತ್ವ ಜ್ಞಾನವು ವಿಶಿಷ್ಟ ಜ್ಞಾನ ವಾಗಿದೆ. ಭೌತಿಕ ಜ್ಞಾನವು ನಮ್ಮ ಬಾಹ್ಯದ ಬದು ಕನ್ನು ಎತ್ತರಿಸಿದರೆ ತತ್ತ್ವ ಜ್ಞಾನವು ನಮ್ಮ ಬದು ಕನ್ನು ಪರಿಪೂರ್ಣಗೊಳಿಸುತ್ತದೆ ಎಂದರು.

ವಿಜ್ಞಾನ, ತಂತ್ರಜ್ಞಾನಗಳು ಸಾಧನಗಳ ಶೋಧನೆಯಲ್ಲಿ ತೊಡಗಿದರೆ ತತ್ತ್ವ ಜ್ಞಾನವು (ಅಂತರಂಗದ ಸಾಧನೆ) ಪಾರಮಾರ್ಥಿಕ ಸುಖದ ಸಾಧನೆಗೆ ಒತ್ತು ನೀಡುತ್ತದೆ. ಅಧ್ಯಾತ್ಮಿಕ ಸುಖವನ್ನು ಆಸಕ್ತರು ಮಾತ್ರ ಅನುಭವಿಸಲು ಸಾಧ್ಯ ಎಂದು ಹೇಳಿದರು.

ಅಧ್ಯಾತ್ಮಿಕ ಜ್ಞಾನವೇ ಪರಮ ಸುಖ. ಅದು ಸತ್ಯದರ್ಶನವನ್ನೂ ಮಾಡಿಸುತ್ತದೆ. ಅದು ನಮಗೆ ಪರಮ ಸತ್ಯದ ಹಾದಿಯನ್ನು ತೋರಿಸುತ್ತದೆ. ತತ್ತ್ವ ಜ್ಞಾನ ತೂಕ ಬದ್ಧವಾಗಿಯೂ, ತರ್ಕಬದ್ಧವಾಗಿಯೂ ಇರುತ್ತದೆ. ತತ್ತ್ವಜ್ಞಾನ ಜಿಜ್ಞಾಸುಗಳಿಗೆ ಅದು ಸಾಧ್ಯವಾಗುತ್ತದೆ. ಪ್ರತಿದಿನವೂ ಧ್ಯಾನ ಮಾಡುತ್ತಾ ತತ್ತ್ವಜ್ಞಾನವನ್ನು ಅಳವಡಿಸಿಕೊಂಡರೆ ನಮ್ಮ ಸ್ವಸ್ವರೂಪದ ದರ್ಶನವಾಗುತ್ತದೆ ಎಂದು ಹೇಳಿದರು.



ತತ್ತ್ವ ಜ್ಞಾನವನ್ನು ಭಾರತ ದೇಶವು ಜಗತ್ತಿಗೆ ಕೊಡುಗೆಯಾಗಿ ನೀಡಿದೆ. ತತ್ತ್ವ ಜ್ಞಾನದಿಂದ ಭಾರತ ಬಹುದಿನಗಳ ವರೆಗೆ ಬಾಳುತ್ತದೆ. ಬಾಳುವಿಕೆಯನ್ನು ಇತರರಿಗೂ ಕಲಿಸುತ್ತದೆ. ದಯೆಗೆ ಬುದ್ದ , ಸತ್ಯಕ್ಕೆ ಗಾಂಧಿ, ಪ್ರೀತಿಗೆ ಏಸು, ಸಮಾನತೆಗೆ ಬಸವಣ್ಣ, ವೈಚಾರಿಕತೆಗೆ ಅಂಬೇಡ್ಕರ್ ಹೀಗೆ ಒಂದೊಂದು ತತ್ತ್ವ ಗಳಿಗೆ ಒಬ್ಬೊಬ್ಬರು ಹೆಸರಾಗಿದ್ದಾರೆ. ಹಾಗಾಗಿ ಜಗತ್ತಿಗೆ ತತ್ತ್ವ ಜ್ಞಾನಿಗಳ ಕೊಡುಗೆ ಅಪಾರವಾಗಿದೆ. ತತ್ತ್ವಗಳನ್ನು ಹೇಳುವುದಕ್ಕಿಂತ ಪಾಲಿಸಿದರೆ ಜಗತ್ತಿನಲ್ಲಿ ಸುಖ ಶಾಂತಿ ನೆಲೆಸುತ್ತದೆ ಎಂದು ಶ್ರೀಗಳು ಪ್ರತಿಪಾದಿಸಿದರು.

ಜೆ.ಹೆಚ್. ಪಟೇಲ್ ಕಾಲೇಜು ಸಂಸ್ಥಾಪಕರಾದ ಪ್ರತಿಭಾ ಬಳ್ಳಿಗಾವಿ ಉಪನ್ಯಾಸ ನೀಡಿದರು. ಮುಖ್ಯ ಅತಿಥಿಗಳಾಗಿ ಸಂಚಾರಿ ಕೆ. ಬಿ.ಆರ್. ಡ್ರಾಮಾ ಕಂಪನಿಯ ಚಿಂದೋಡಿ ಶಂಭುಲಿಂಗಪ್ಪ, ವಿಶ್ವವಿನೂತನ ಮಹಿಳಾ ಸಮಾಜದ ವನಜಾ ಮಹಾಲಿಂಗಯ್ಯ ಉಪಸ್ಥಿತರಿದ್ದರು.

ಕಾರ್ಯಕ್ರಮದ ನಂತರ ಅದ್ವೈತ ಫೌಂಡೇಶನ್ ಅವರಿಂದ ಜಗಜ್ಯೋತಿ ಬಸವೇಶ್ವರ ನಾಟಕ ಪ್ರದರ್ಶನಗೊಂಡಿತು.

ಜ್ಯೋತಿ ಹಿರೇಮಠ ನಿರೂಪಿಸಿದರು. ಶರಣ ಬಸವ ಸ್ವಾಗತಿಸಿದರು. ರುದ್ರಾಕ್ಷಿಬಾಯಿ ವಚನ ಗಾಯನ ನಡೆಸಿಕೊಟ್ಟರು.

# ಮಹಿಳಾ ಸಬಲೀಕರಣಕ್ಕಾಗಿ ನಿಗಮದಿಂದ ಹಲವು ಯೋಜನೆ

**ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ವಿ. ರಾಮಚಂದ್ರ**

ಜಗಳೂರು, ಜು. 5- ರಾಜ್ಯದ ಪರಿಶಿಷ್ಟ ಪಂಗಡದ ಜನರ ಆರ್ಥಿಕ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣಕ್ಕೆ ನಿಗಮದ ವತಿಯಿಂದ ಅನೇಕ ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದು ಶಾಸಕರು ಹಾಗೂ ಶ್ರೀ ಮಹರ್ಷಿ ವಾಲ್ಮೀಕಿ ಪಂಗಡದ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ವಿ. ರಾಮಚಂದ್ರ ತಿಳಿಸಿದ್ದಾರೆ.

ಪಟ್ಟಣದ ವಾಲ್ಮೀಕಿ ಭವನದಲ್ಲಿ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮ, ಧಾರವಾಡದ ಸುವರ್ಣ ಕಂಪ್ಯೂಟರ್ ತರಬೇತಿ ಕೇಂದ್ರದ ಸಹಯೋಗದಲ್ಲಿ ಗಿರಿಜನ ಉಪಯೋಜನೆ ಟೈಲರಿಂಗ್ ಮತ್ತು ಫ್ಯಾಷನ್ ಡಿಸೈನಿಂಗ್ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಒಟ್ಟಾರೆ 8000 ಫಲಾನುಭವಿಗಳಿಗೆ ಕೊಳವೆ ಬಾವಿ ಕೊರೆಯುವ ಮೂಲಕ ಅವರಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ತಾಲ್ಲೂಕಿನಲ್ಲಿ 400 ಫಲಾನುಭವಿಗಳಿಗೆ ಗಂಗಾಕಲ್ಯಾಣ ಯೋಜನೆಯಲ್ಲಿ ಕೊಳವೆಬಾವಿ ಕೊರೆಸಲಾಗಿದೆ. 77 ಯುವಕರಿಗೆ ಲಘುವಾಹನ ಹಾಗೂ ಕಾರುಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದರು.

ವಿಧಾನಸಭಾ ಕ್ಷೇತ್ರದ 57 ಕೆರೆ ತುಂಬಿಸುವ ಯೋಜನೆಗೆ 665 ಕೋಟಿ ರೂ., ಭದ್ರಾ ಮೇಲ್ದಂಡೆ ಯೋಜನೆ ಜಾರಿಗೆ 1336 ಕೋಟಿ ರೂ. ಅನುದಾನ ತರಲಾಗಿದೆ. 200 ಕೋಟಿ ರೂ. ವೆಚ್ಚದಲ್ಲಿ ತಾಲ್ಲೂಕಿನ 90 ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರು ಒದಗಿಸಲಾಗುತ್ತಿದೆ. ಒಟ್ಟಾರೆ ಕ್ಷೇತ್ರದ ಅಭಿವೃದ್ಧಿಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿಸಿದ್ದೇನೆ ಎಂದರು.

ಕೆಲವರು ನನ್ನ ಅಭಿವೃದ್ಧಿ ಕಾರ್ಯಗಳನ್ನು ನೋಡಿ ಸಹಿಸದೆ ಕ್ಷೇತ್ರದ ಅಭಿವೃದ್ಧಿಗೆ ರಾಮಚಂದ್ರ ಕೊಡುಗೆ ಏನು? ಎಂದು ಟೀಕಿಸುತ್ತಿದ್ದಾರೆ. ನಾನು ಮಾಡಿರುವ ಅಭಿವೃದ್ಧಿ ಕಾರ್ಯಗಳ ಪಟ್ಟಿಯನ್ನೇ ಕೊಡುತ್ತೇನೆ, ಟೀಕೆ ಮಾಡುವವರಿಗೆ ಇದೇ ನನ್ನ ಉತ್ತರವಾಗಲಿದೆ ಎಂದರು.

ನನ್ನ ಬಗ್ಗೆ ವಿನಾಕಾರಣ ಟೀಕಿಸುವವರ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ಮುಂದಿನ ಚುನಾವಣೆಗೆ ನನಗೆ ಟಿಕೆಟ್ ಸಿಗುವುದಿಲ್ಲ ಎಂದು ಕೆಲವರು ಹಬ್ಬಿಸುತ್ತಿದ್ದಾರೆ. ಆದರೆ, ಈ ಬಗ್ಗೆ ನಮ್ಮ ಪಕ್ಷದ ವರಿಷ್ಠರು ಈಚೆಗೆ ನಡೆದ ಮುಖ್ಯ ಮಂತ್ರಿಗಳ ಸಮಾರಂಭದಲ್ಲಿ ನನಗೇ ಟಿಕೆಟ್ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಕ್ಷೇತ್ರದ ಜನರ ಆಶೀರ್ವಾದ ಇರುವವರೆಗೂ ನಾನು ಶಾಸಕನಾಗಿ ಇರುತ್ತೇನೆ ಎಂದು ಶಾಸಕ ಎಸ್.ವಿ. ರಾಮಚಂದ್ರ ದೃಢ ಮಾತಿನಲ್ಲಿ ಸ್ಪಷ್ಟಪಡಿಸಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಬಿ.ಎಸ್. ಸುಮಾ ಮಾತನಾಡಿ, ನಿಗಮದ ವತಿಯಿಂದ ವಾಲ್ಮೀಕಿ ಸಮುದಾಯದ ಮಹಿಳೆಯರಿಗೆ 7.5 ಕೋಟಿ ರೂ. ವೆಚ್ಚದಲ್ಲಿ ಟೈಲರಿಂಗ್ ಮತ್ತು ಫ್ಯಾಷನ್ ಡಿಸೈನಿಂಗ್ ತರಬೇತಿ ನೀಡಿ ಅವರಿಗೆ ಉಚಿತವಾಗಿ ಟೈಲರಿಂಗ್ ಮಷೀನ್ ನೀಡುತ್ತಿದ್ದೇವೆ. ಉದ್ಯಮಶೀಲತೆ ಅಭಿವೃದ್ಧಿಗೆ 3.50 ಲಕ್ಷ ರೂ> ನೀಡಲಾಗುತ್ತಿದೆ ಹಾಗೂ ಭೂ ರೈತರಿಗೆ ಜಮೀನು ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಸಮಾರಂಭದಲ್ಲಿ ರಾಜ್ಯ ರೇಷ್ಮೆ ಮಾರಾಟ ಮಂಡಳಿಯ ಅಧ್ಯಕ್ಷರಾದ ಶ್ರೀಮತಿ ಸವಿತಾ ವಿ. ಅಮರಶೆಟ್ಟಿ, ನಿಗಮದ ನಿರ್ದೇಶಕ ಟಿ.ಎಸ್. ನಾಗರಾಜ್, ಶ್ರೀಮತಿ ಇಂದಿರಾ ಎಸ್.ವಿ. ರಾಮಚಂದ್ರ, ತಾಪಂ ಅಧ್ಯಕ್ಷ ಎಸ್. ಸಿದ್ದಪ್ಪ, ಉಪಾಧ್ಯಕ್ಷೆ ಮಂಜಮ್ಮ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮೀಪತಿ ಉಪಸ್ಥಿತರಿದ್ದರು.



# ನನ್ನ ಪ್ರಕಾರ ಕಾಳಿ ಮಾಂಸ – ಮದ್ಯ ಸೇವಿಸುವ ದೇವತೆ

## ಪ್ರತಿಯೊಬ್ಬರಿಗೂ ತಮಗೆ ತೋಚಿದ ರೀತಿ ಆರಾಧಿಸುವ ಹಕ್ಕಿದೆ : ತೃಣಮೂಲ ಕಾಂಗ್ರೆಸ್ ಸಂಸದೆ ಮೊಯಿತ್ರ

ನವದೆಹಲಿ, ಜು. 5 – ಪ್ರತಿಯೊಬ್ಬ ವ್ಯಕ್ತಿಗೂ ದೇವರು ಹಾಗೂ ದೇವಿಯರನ್ನು ತನಗೆ ತೋಚಿದ ರೀತಿಯಲ್ಲಿ ಆರಾಧಿಸುವ ಹಕ್ಕಿದೆ ಎಂದಿರುವ ತೃಣಮೂಲ ಕಾಂಗ್ರೆಸ್ ಸಂಸದೆ ಮಹುವಾ ಮೊಯಿತ್ರ, ಕಾಳಿ ದೇವಿಯನ್ನು ಮಾಂಸ ತಿನ್ನುವ ಹಾಗೂ ಮದ್ಯ ಸೇವಿಸುವ ರೀತಿ ನಾನು ನೋಡುತ್ತೇನೆ ಎಂದಿದ್ದಾರೆ.

ಸುದ್ದಿ ಸಂಸ್ಥೆಯೊಂದರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ದೇವರನ್ನು ಯಾವ ರೀತಿ ನೋಡಬೇಕು ಎಂಬುದು ವ್ಯಕ್ತಿಗಳಿಗೆ ಬಿಟ್ಟ ವಿಷಯ ಎಂದಿದ್ದಾರೆ.

ಭೂತಾನ್ ಇಲ್ಲವೇ ಸಿಕ್ಕಿಂಗೆ ಹೋದಾಗ ಅಲ್ಲಿ ದೇವರಿಗೆ ವಿಸ್ಕಿ ನೈವೇದ್ಯ ಮಾಡುವುದನ್ನು ನೋಡಬಹುದು. ಉತ್ತರ ಪ್ರದೇಶದಲ್ಲಿ ದೇವರಿಗೆ ವಿಸ್ಕಿಯನ್ನು ಪ್ರಸಾದವಾಗಿ ಕೊಡುತ್ತೇನೆ ಎಂದರೆ ದೈವ ನಿಂದನೆಯಾಗುತ್ತದೆ ಎಂದವರು ವಿವರಿಸಿದ್ದಾರೆ.

ಒಬ್ಬರ ಪರಿಕಲ್ಪನೆ ಒಂದು ರೀತಿ ಇರುತ್ತದೆ. ಪಶ್ಚಿಮ ಬಂಗಾಳದ ಬಿರ್ಭುಮ್ ಜಿಲ್ಲೆಯ ಶಕ್ತಿ ಪೀಠವಾದ ತಾರಾ ಪೀಠಕ್ಕೆ ಹೋಗಿ ನೋಡಿದರೆ, ಅಲ್ಲಿ ಸಾಧುಗಳು ಭಂಗಿ ಸೇವಿಸುತ್ತಿರುವುದು ಕಾಣುತ್ತದೆ. ಇದು ಅಲ್ಲಿನ ಜನರು ಕಾಳಿಯನ್ನು ಆರಾಧಿಸುವ ರೀತಿ. ನಾನು ಹಿಂದೂ ಆಗಿ ಕಾಳಿಯನ್ನು ಪೂಜಿಸುತ್ತೇನೆ, ನನಗೆ ಕಾಳಿಯನ್ನು ಆ ರೀತಿ ಪರಿಕಲ್ಪನೆ ಮಾಡಿಕೊಳ್ಳುವ ಸ್ವಾತಂತ್ರ್ಯ ಇದೆ ಎಂದು ಮೊಯಿತ್ರ ಹೇಳಿದ್ದಾರೆ.

ಚಿತ್ರ ನಿರ್ಮಾಪಕಿ ಲೀನಾ ಮಣಿಮೇಕಲೈ ಅವರು ಕಾಳಿ ದೇವಿಯನ್ನು ಸಿಗರೇಟು ಸೇವಿಸುವ ಹಾಗೂ ಎಲ್‌ಜಿಬಿಟಿಕ್ಯೂ ಧ್ವಜ ಹಿಡಿದಿರುವ ರೀತಿಯಲ್ಲಿ ಬಿಂಬಿಸಿದ್ದು ವಿವಾದಕ್ಕೆ ಕಾರಣವಾಗಿತ್ತು.

ಈ ಹಿನ್ನೆಲೆಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸುತ್ತಿದ್ದ ಮೊಯಿತ್ರ, ಈ ಚಿತ್ರದ ಬಗ್ಗೆ ನನಗೆ ಯಾವುದೇ ಆಕ್ಷೇಪ ಇಲ್ಲ. ವೈಯಕ್ತಿಕ ಹಂತದಲ್ಲಿ ಧರ್ಮ ಇರುವವರೆಗೂ ಬೇರೆಯವರಿಗೆ ಯಾವುದೇ ಆಕ್ಷೇಪ ಇರಬಾರದು ಎಂದಿದ್ದಾರೆ.

ಕಾಳಿ ದೇವಿಯನ್ನು ಮಾಂಸ ಸೇವಿಸುವ ರೀತಿಯಲ್ಲಿ ಪರಿಕಲ್ಪಿಸುವ ಸ್ವಾತಂತ್ರ್ಯ ನನಗಿದೆ. ಬೇರೆಯವರು ಶಾಖಾಹಾರಿಯಾಗಿ ಹಾಗೂ ಬಿಳಿ ಬಟ್ಟೆಯಲ್ಲಿ ಆರಾಧಿಸುವ ಸ್ವಾತಂತ್ರ್ಯ ಹೊಂದಿದ್ದಾರೆ ಎಂದವರು ಹೇಳಿದ್ದಾರೆ.

ತಮ್ಮ ಹೇಳಿಕೆಗಳಿಗೆ ಟೀಕೆಗಳು ಎದುರಾದ ನಂತರ, ನಿಲುವು ಸಮರ್ಥಿಸಿಕೊಂಡಿರುವ ಅವರು, ಸುಳ್ಳು ಹೇಳುವುದರಿಂದ ಉತ್ತಮ ಹಿಂದೂಗಳಾಗುವುದಿಲ್ಲ. ನಾನೆಂದೂ ಚಿತ್ರವೊಂದರ ಪೋಸ್ಟರ್ ಇಲ್ಲವೇ ಧೂಮಪಾನವನ್ನು ಉಲ್ಲೇಖಿಸಿಲ್ಲ. ತಾರಾ ಪೀಠದ ಕಾಳಿ ಮಾತೆ ದೇವಾಲಯಕ್ಕೆ ಹೋಗಿ ಅಲ್ಲಿ ನೈವೇದ್ಯಕ್ಕೆ ನೀಡುವ ಆಹಾರ ಹಾಗೂ ಪಾನೀಯವನ್ನು ನೋಡಿ ಎಂದಿದ್ದಾರೆ.

ಹಿಂದೂ ದೇವರು ಹಾಗೂ ದೇವಿಯರನ್ನು ಅವಮಾನಿಸುವುದು ತೃಣಮೂಲ ಕಾಂಗ್ರೆಸ್‌ನ ಅಧಿಕೃತ ನಿಲುವೇ? ಎಂದು ಪ್ರಶ್ನಿಸಿರುವ ಬಿಜೆಪಿ, ಈ ಬಗ್ಗೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸ್ಪಷ್ಟನೆ ನೀಡಬೇಕು ಎಂದು ಒತ್ತಾಯಿಸಿದೆ.

ಆದರೆ, ಮೊಯಿತ್ರ ನೀಡಿರುವ ಹೇಳಿಕೆಯಿಂದ ದೂರ ಸರಿದಿರುವ ತೃಣಮೂಲ ಕಾಂಗ್ರೆಸ್, ಕಾಳಿದೇವಿ ಕುರಿತು ಅವರು ವೈಯಕ್ತಿಕ ಹೇಳಿಕೆ ನೀಡಿದ್ದಾರೆ. ಈ ಹೇಳಿಕೆಗಳನ್ನು ಪಕ್ಷ ಸಮರ್ಥಿಸುವುದಿಲ್ಲ. ಇಂತಹ ಹೇಳಿಕೆಗಳನ್ನು ಬಲವಾಗಿ ಖಂಡಿಸುವುದಾಗಿ ತಿಳಿಸಿದೆ.

# ಜನರ ಕಣ್ಣು ತೆರೆಸಿದ ದಾರ್ಶನಿಕ ಶಿಶುನಾಳ ಷರೀಫರು

ಹರಪನಹಳ್ಳಿ, ಜು. 5- ಸಮಾಜದಲ್ಲಿ ತಲೆದೋರುತ್ತಿದ್ದ ಧಾರ್ಮಿಕ ದೋಷಗಳು, ಅಂಧ ಶ್ರದ್ಧೆ ಹಾಗೂ ಮೂಢನಂಬಿಕೆಗಳನ್ನು ಕಟುವಾಗಿ ಟೀಕಿಸಿ ಜನರ ಕಣ್ಣು ತೆರೆಸಿದ ದಾರ್ಶನಿಕ ಸಂತ ಶಿಶುನಾಳ ಷರೀಫರು ಎಂದು ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ತೆಗ್ಗಿನಮಠ ಸಂಸ್ಥೆಯ ಕಟ್ಟಿ ಸೇತುರಾಮಾಚಾರ್ಯ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪರ್ಲ್ ಪಬ್ಲಿಕ್ ಶಾಲೆ ಹಾಗೂ ಕಟ್ಟಿ ಸೇತುರಾಮಾಚಾರ್ಯ ಶಿಕ್ಷಣ ಮಹಾವಿದ್ಯಾಲಯ ಇವರ ಸಹಯೋಗದಲ್ಲಿ ಸಂತ ಶಿಶುನಾಳ ಷರೀಫರ ಜಯಂತಿ ಅಂಗವಾಗಿ ತತ್ವಪದ ಮತ್ತು ಜೀವನ ಕುರಿತು ಜರುಗಿದ ವಿಚಾರ ಸಂಕಿರಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದಾರ್ಶನಿಕರ ನಾಡು ಕರುನಾಡು, ದಾಸರು, ತತ್ವಪದಕಾರರು ಹಾಗೂ ಸರ್ವಧರ್ಮೀಯರು ಬದುಕಿ ಬಾಳಿದ ನಾಡು, ಸಂತ ಶಿಶುನಾಳ ಷರೀಫರು ಅಧ್ಯಾತ್ಮಿಕ ಕ್ಷೇತ್ರದಲ್ಲಿ ಮೇರು ವ್ಯಕ್ತಿತ್ವ ಹೊಂದಿದವರು. ಲೋಕ ಕಲ್ಯಾಣಕ್ಕಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಇವರು ತಮ್ಮ ಬದುಕು, ಚಿಂತನೆ, ಸಾಹಿತ್ಯಗಳಿಂದ ಜನರ ಮೇಲೆ ಅಪಾರ ಪ್ರಭಾವ ಬೀರಿದ್ದು, ಶಿಶುನಾಳ ಷರೀಫರ ತತ್ವಪದಗಳು ಧಾರ್ಮಿಕ ಭಾವೈಕ್ಯತೆ, ಸಾಮರಸ್ಯದ ಸಮಾನತೆಗೆ ಅಪೂರ್ವ ನಿದರ್ಶನಗಳಾಗಿವೆ ಎಂದರು.



ಪ್ರಕೃತಿ ವಿದ್ಯಾಸಂಸ್ಥೆಯ ಅಧ್ಯಕ್ಷ ಶಶಿಧರ ಪೂಜಾರ್ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ನಾವು ಒತ್ತಡದ ಪರಿಸ್ಥಿತಿಯಲ್ಲಿ ಬದುಕುತ್ತಿದ್ದೇವೆ. ಇಂತಹ ವೇಳೆಯಲ್ಲಿ ದಾರ್ಶನಿಕರ ಚಿಂತನೆಗಳು, ಬರಹಗಳು, ತತ್ವಪದಗಳಿಂದ ತುಸು ನೆಮ್ಮದಿ ಸಿಗುತ್ತದೆ ಎಂದರು. ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ರಾಣೇಬೆನ್ನೂರಿನ ಉಪನ್ಯಾಸಕ ಬಿ.ಬಿ. ನಂದ್ಯಾಲ್, ಕಟ್ಟಿ ಸೇತುರಾಮಾಚಾರ್ಯ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಟಿ.ಎಂ. ರಾಜಶೇಖರಯ್ಯ, ಪರ್ಲ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಸುಮ ಉಪ್ಪಿನ ಮಾತನಾಡಿದರು.

**ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ**

ಈ ವೇಳೆ ಪ್ರಕೃತಿ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಚೆನ್ನೇಶ ಬಣಕಾರ್, ನಿರ್ದೇಶಕ ನಾಗೇಶ ಉಪ್ಪಿನ, ಗಾಯಕ ಬಸವರಾಜ ಭಂಡಾರಿ, ಕಟ್ಟಿ ಸೇತುರಾಮಾಚಾರ್ಯ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ಮರಳು ಸಿದ್ದಪ್ಪ ಎನ್. ಟಿ. ಸೇರಿದಂತೆ ಇತರರು ಇದ್ದರು.

# ಬಾರದ ಮಳೆ ಬಂದಿದೆ... ದಾರಿ ತಪ್ಪದಿರೋಣ

* ಈ ವರೆಗೆ ಮಳೆಯಾಗದೇ ಈಗ ಆಗಿದ್ದಲ್ಲಿ.. ಸೋಯಾ ಅವರೆ, ಗೋವಿನಜೋಳ, ಶೇಂಗಾ, ಸಿರಿಧಾನ್ಯ ಬಿತ್ತನೆ ಮಾಡಬಹುದು.

* ತೇವಾಂಶ ಕೊರತೆಯಾಗದಿದ್ದರೆ, ವಾಡಿಕೆ ಇಳುವರಿಯನ್ನು ಸಿರಿಧಾನ್ಯಗಳಲ್ಲಿ ಮಾತ್ರ ಪಡೆಯಲು ಸಾಧ್ಯ.

* ಬೀಜಗಳನ್ನು ನೀರಿನಲ್ಲಿ ನೆನೆಸಿ ಬೀಜೋಪಚಾರ (ಕ್ಲೋರ್ ಪೈರಿಫಾಸ್ + ಕಾರ್ಬೆಂಡೈಜಿಂ ಅಥವಾ ಅಜಾಡಿರಕ್ಟಿನ್+ ಟ್ರೈಕೋಡರ್ಮಾ) ಮಾಡಿ ಬಿತ್ತಬೇಕು.

* ಹಿಂಗಾರಿ ಬಿತ್ತನೆ ಮಾಡುವಲ್ಲಿ ಕ್ವಾತಾಳು (18"-24") ದಾಯದಲ್ಲಿ ಬಿತ್ತನೆ ಮಾಡುವುದು ಸೂಕ್ತ.

* ಅಲಸಂದೆ, ಸೋಯಾ ಅವರೆ, ಹತ್ತಿ, ಶೇಂಗಾ ಮುಂತಾದ ಬೆಳೆಗಳಲ್ಲಿ, ರಸ ಹೀರುವ ಕೀಟಗಳ ಬಾಧೆ ತಡೆಯಲು 4-6 ತಲೆ ಸಾಲು ಗೋವಿನಜೋಳ ಬೆಳೆಯಬೇಕು. 0.250-0.500 ಕೆಜಿ ಕೊತ್ತಂಬರಿ ಬೀಜ ಬೆರೆಸಿ ಬಿತ್ತುವುದು ಸಹ ಸೂಕ್ತ.

* ಈಗ ಮಾಡುವ ತಡ ಬಿತ್ತನೆಯಿಂದ ಎಲ್ಲ ಬೆಳೆಗಳ ಇಳುವರಿ ಕಡಿಮೆಯಾಗುವುದು ನಿಶ್ಚಿತ.*

* ಮೇ ಅಂತ್ಯ - ಜೂನ್ ಮೊದಲ ಭಾಗದಲ್ಲಿ ಬಿತ್ತಿದ ಬೆಳೆಗಳಿಗೆ ಇದು ಸ್ವರ್ಣ ಮಳೆ. ಮಳೆಯ ಪ್ರಮಾಣ ಆಧರಿಸಿ ( ಕಡಿಮೆ ಇದ್ದರೆ ಕಡಿಮೆ ಪ್ರಮಾಣ) ಪೋಷಕಾಂಶ ಸಿಂಪಡಣೆ ಅತ್ಯಗತ್ಯ. ತಲಾ 2-4 ಗ್ರಾಂ 13:0:45, 19:19:19 ಮತ್ತು ಲಘು ಪೋಷಕಾಂಶ (ಕಂಪನಿ ಮಾಹಿತಿ ಅನ್ವಯ) ಬೆರೆಸಿದ ದ್ರಾವಣ ಬಳಸಬೇಕು. ಎಕರೆಗೆ 12-15 ಕ್ಯಾನ್ ದ್ರಾವಣ ಬಳಸಬೇಕು.

* ಯಾವುದೇ ಕಾರಣಕ್ಕೂ, ಚೀಲಗಟ್ಟಲೆ ಯೂರಿಯ ಬಳಸಬಾರದು.

* ಬಹಳ ದಿನಗಳ ನಂತರ ಮಳೆಯಾಗಿದ್ದು ಸೈನಿಕ ಹುಳು, ಗೊಣ್ಣೆ ಹುಳು ಬಾಧೆ ಹೆಚ್ಚಬಹುದು. ಈ ಕುರಿತು ತಜ್ಞರ ಸಲಹೆ ಪಡೆದು ಸೂಕ್ತ ಪೀಡೆನಾಶಕ ಬಳಸಬೇಕು.

* ಸೋಯಾ ಅವರೆ, ಶೇಂಗಾ, ಹೆಸರು, ಉದ್ದು , ಅಲಸಂದೆ ಗಳಲ್ಲಿ ತುಕ್ಕು (ಕುಂಕುಮ) ರೋಗ, ಬುಡಕೊಳೆ ರೋಗ (ಗೊರ್ಲಿಯಾಡುವುದು) ಬಾಧೆ ಕಾಣುವ ಸಾಧ್ಯತೆ ಹೆಚ್ಚು. ಶಿಲೀಂಧ್ರನಾಶಕ ಮತ್ತು ಪೋಷಕಾಂಶ ಗಳ ಸಮತೋಲ ಬಳಕೆ ಅತ್ಯಗತ್ಯ.

* ಗೋವಿನಜೋಳ ದಲ್ಲಿ ಕೇದಿಗೆ ರೋಗ , ಪೋಕಾ ರೋಗ, ದುಂಡಾಣು ಕಾಂಡಕೊಳೆ ರೋಗ ಸಾಧ್ಯತೆ ಇದ್ದು ಅಗತ್ಯ ಪೀಡೆನಾಶಕ ಬಳಸಬೇಕು.

* ಹತ್ತಿ ಬೆಳೆಯಲ್ಲಿ ಸಹ ಪೋಷಕಾಂಶ, ಪೀಡೆನಾಶಕ. ಸಿಂಪಡಣೆ ಗಳನ್ನು ಕಾಲಕಾಲಕ್ಕೆ ಮಾಡಬೇಕು.

**- ಆರ್.ಜಿ.ಗೊಲ್ಲರ್,**
ನಿವೃತ್ತ ಕೃಷಿ ಅಧಿಕಾರಿಗಳು, ದಾವಣಗೆರೆ

## ಲಕ್ಷ್ಮಣ ರೇಖೆ ಉಲ್ಲಂಘನೆ

**(1ನೇ ಪುಟದಿಂದ)** ದೃಷ್ಟಿಯಿಂದಲೂ ನ್ಯಾಯಾಂಗದ ಟಿಪ್ಪಣಿಗಳು ನ್ಯಾಯಿಕ ಆದೇಶದ ಭಾಗವಾಗಿಲ್ಲ. ನ್ಯಾಯಾಂಗದ ಇತಿಹಾಸದಲ್ಲಿ ಈ ರೀತಿಯ ಉಲ್ಲಂಘನೆಗಳು ಯಾವತ್ತೂ ಆಗಿರಲಿಲ್ಲ ಎಂದವರು ಹೇಳಿದ್ದಾರೆ. ನೂಪುರ್ ಶರ್ಮಾ ಹೇಳಿಕೆಗಳನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಜೆ.ಬಿ ಪರ್ಡಿವಾಲ ಅವರು ಕಟುವಾಗಿ ತರಾಟೆಗೆ ತೆಗೆದುಕೊಂಡಿದ್ದು, ದೇಶದಲ್ಲಿ ನಡೆಯುತ್ತಿರುವ ಹಿಂಸಾಚಾರಗಳಿಗೆ ಶರ್ಮಾ ಕಾರಣ ಎಂದು ಹೇಳಿದ್ದರು.

ಎಲ್ಲಾ ಸಂಸ್ಥೆಗಳು ಸಂವಿಧಾನಕ್ಕೆ ಅನುಗುಣವಾಗಿ ಕಾರ್ಯ ನಿರ್ವಹಿಸಿದರೆ ಮಾತ್ರ ಪ್ರಜಾಪ್ರಭುತ್ವ ಸ್ಥಿರವಾಗಿರಲು ಸಾಧ್ಯ. ಇಬ್ಬರು ನ್ಯಾಯಮೂರ್ತಿಗಳು ನೀಡಿರುವ ಹೇಳಿಕೆಗಳು ಲಕ್ಷ್ಮಣ ರೇಖೆ ಉಲ್ಲಂಘಿಸುವಂಥವು. ಇದರಿಂದಾಗಿ ನಾವು ಬಹಿರಂಗ ಹೇಳಿಕೆ ನೀಡಬೇಕಾಗಿ ಬಂದಿದೆ ಎಂದು ನಿವೃತ್ತ ನ್ಯಾಯಮೂರ್ತಿಗಳು ಹೇಳಿದ್ದಾರೆ.

ದುರಾದೃಷ್ಟಕರ ಹಾಗೂ ಅಭೂತಪೂರ್ವ ಹೇಳಿಕೆಗಳಿಂದ ದೇಶದ ಒಳಗೆ ಹಾಗೂ ಹೊರಗೆ ಆಘಾತದ ಅಲೆಗಳು ಎದ್ದಿವೆ ಎಂದೂ ಪತ್ರದಲ್ಲಿ ತಿಳಿಸಲಾಗಿದೆ.

ನೂಪುರ್ ಶರ್ಮಾ ಅವರಿಗೆ ನ್ಯಾಯಿಕ ಸೇವೆಯನ್ನು ನಿರಾಕರಿಸಿರುವುದು ಸಂವಿಧಾನದ ಮುನ್ನುಡಿ, ಸ್ಫೂರ್ತಿ ಹಾಗೂ ತಿರುಳಿಗೆ ವಿರುದ್ಧವಾಗಿದೆ. ಈ ಮೂಲಕ ಉದಯಪುರದಲ್ಲಿ ಹಾಡು ಹಗಲೇ ಶಿರಚ್ಛೇದನ ಕೃತ್ಯ ಎಸಗಿದವರನ್ನು ಮುಕ್ತಗೊಳಿಸಿದಂತಾಗಿದೆ ಎಂದೂ ಪತ್ರದಲ್ಲಿ ಹೇಳಲಾಗಿದೆ.

ಎಫ್.ಐ.ಆರ್. ದಾಖಲಿಸಿದ ಕಾರಣಕ್ಕಾಗಿ ಬಂಧನ ಆಗಬೇಕು ಎಂದು ಟಿಪ್ಪಣಿ ಮಾಡಿರುವುದು ಕಾನೂನು ವಲಯದಲ್ಲಿ ಅಚ್ಚರಿ ಹಾಗೂ ಆಘಾತ ತಂದಿದೆ. ಇತರೆ ಸಂಸ್ಥೆಗಳಿಗೆ ನೋಟಿಸ್ ಸಹ ಕಳಿಸದೇ ಅವರ ಬಗ್ಗೆ ಟಿಪ್ಪಣಿ ಮಾಡುವುದು ಚಿಂತೆಗೀಡು ಮಾಡುವ ಹಾಗೂ ಆತಂಕ ತರುವಂಥದ್ದಾಗಿದೆ ಎಂದು ತಿಳಿಸಲಾಗಿದೆ.

ತಮ್ಮ ವಿರುದ್ಧ ದಾಖಲಿಸಲಾದ ಎಲ್ಲಾ ಎಫ್.ಐ.ಆರ್.ಗಳನ್ನು ಒಗ್ಗೂಡಿಸಬೇಕೆಂದು ಶರ್ಮಾ ಮನವಿ ಮಾಡಿಕೊಂಡಿರುವುದು ಸೂಕ್ತವಾಗಿದೆ. ನೂಪುರ್ ಪ್ರಕರಣವೊಂದನ್ನೇ ಏಕೆ ಪ್ರತ್ಯೇಕವಾಗಿ ಪರಿಗಣಿಸಲಾಗಿದೆ ಎಂಬುದು ಅಚ್ಚರಿ ತರುವಂಥದ್ದಾಗಿದೆ. ಸುಪ್ರೀಂ ಕೋರ್ಟ್‌ನ ಈ ರೀತಿಯ ವರ್ತನೆ ಮೆಚ್ಚುವಂಥದ್ದಲ್ಲ, ಇದು ಸರ್ವೋನ್ನತ ನ್ಯಾಯಾಲಯದ ಗೌರವದ ಮೇಲೆ ಪರಿಣಾಮ ಬೀರುತ್ತದೆ ಎಂದೂ ಪತ್ರದಲ್ಲಿ ಹೇಳಲಾಗಿದೆ.

# ಕಾನೂನಿನ ಚೌಕಟ್ಟಿನೊಳಗೆ ಬಕ್ರೀದ್ ಆಚರಿಸಿ

## ಮಲೇಬೆನ್ನೂರು : ಬಕ್ರೀದ್ ಶಾಂತಿ ಸಭೆಯಲ್ಲಿ ಸಿಪಿಐ ತಿಮ್ಮಣ್ಣ ಮನವಿ



ಮಲೇಬೆನ್ನೂರು, ಜು. 5- ತ್ಯಾಗ, ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಶಾಂತಿ, ಸಾಮರಸ್ಯ ಹಾಗೂ ಕಾನೂನಿನ ಚೌಕಟ್ಟಿನೊಳಗೆ ಆಚರಿಸುವಂತೆ ಹರಿಹರ ವೃತ್ತದ ಪ್ರಭಾರ ಪೊಲೀಸ್ ವೃತ್ತಾಧಿಕಾರಿ ಸಿ. ತಿಮ್ಮಣ್ಣ ಕರೆ ನೀಡಿದ್ದಾರೆ.

ಅವರು ಮಂಗಳವಾರ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಬಕ್ರೀದ್ ಹಬ್ಬದ ಅಂಗವಾಗಿ ಹಮ್ಮಿಕೊಂಡಿದ್ದ ಸೌಹಾರ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸರ್ಕಾರ ಗೋ ಹತ್ಯೆ ನಿಷೇಧ ಮಾಡಿರುವುದರಿಂದ ಯಾರೂ ಗೋಹತ್ಯೆ ಮಾಡುವಂತಿಲ್ಲ. ಒಂದು ವೇಳೆ ಯಾರಾದರೂ ಮಾಡಲು ಮುಂದಾದಲ್ಲಿ ಅಂತವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.

ಗೋವುಗಳ ಸಾಗಾಣಿಕೆ ತಡೆಗಟ್ಟಲು ಅಲ್ಲಲ್ಲಿ ಚೆಕ್ ಪೋಸ್ಟ್‌ಗಳನ್ನು ಹಾಕಲಾಗಿದ್ದು, ಎಲ್ಲಾ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ. ಈ ವೇಳೆ ವಿನಾಕಾರಣ ಯಾರೂ ನೈತಿಕ ಪೊಲೀಸ್ ಗಿರಿ ಮಾಡ ಬೇಡಿ ಎಂದು ತಿಮ್ಮಣ್ಣ ಕೇಳಿಕೊಂಡರು.

ಉಪ ತಹಶೀಲ್ದಾರ್ ಆರ್. ರವಿ ಮಾತನಾಡಿ, ಪಟ್ಟಣದಲ್ಲಿ ಹಿಂದೂ - ಮುಸ್ಲಿಂ ಬಾಂಧವರ ಸಾಮರಸ್ಯದಿಂದ ಎಲ್ಲಾ ಹಬ್ಬಗಳನ್ನು ಆಚರಿಸುವ ಮೂಲಕ ಮಾದರಿಯಾಗಿದ್ದಾರೆ ಎಂದರು.

ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ಮಾತನಾಡಿ, ಬಕ್ರೀದ್ ಹಬ್ಬಕ್ಕೆ ಪುರಸಭೆಯಿಂದ ಅಗತ್ಯ ಸೌಲಭ್ಯ ಕಲ್ಪಿಸುವುದಾಗಿ ತಿಳಿಸಿದರು.

ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ ಮಾತನಾಡಿ, ಮಲೇಬೆನ್ನೂರು ಅತಿ ಸೂಕ್ಷ್ಮ ಎಂಬ ಹಣೆಪಟ್ಟಿಯನ್ನು ತೆಗೆದು ಹಾಕಿದ್ದು, ಇದೀಗ ಸೌಹಾರ್ದ ಪಟ್ಟಣವಾಗಿದೆ. ಪಟ್ಟಣದ ಹಿತದೃಷ್ಟಿಯಿಂದ ಈ ಹಿಂದೆ ಸುನೀಲ್‌ಕುಮಾರ್ ಹುಲ್ಲುಮನಿ ಅವರು ಪಿಎಸ್‌ಐ ಆಗಿದ್ದಾಗ ಪುರಸಭೆಯಿಂದ 25 ಲಕ್ಷ ರೂ.ಗಳನ್ನು ಸಿಸಿ ಟಿವಿ ಕ್ಯಾಮೆರಾ ಅಳವಡಿಕೆಗೆ ನೀಡಿದ್ದರು. ಇದೀಗ ಪಿಎಸ್‌ಐ ರವಿಕುಮಾರ್ ಅವರ ಮನವಿಗೆ ಮತ್ತೆ 15 ಲಕ್ಷ ರೂ. ಅನುದಾನವನ್ನು ಪುರಸಭೆ ಸದಸ್ಯರು ನೀಡಲು ಮುಂದಾಗಿರುವುದು ಶ್ಲಾಘನೀಯ ಎಂದರು.

ಇದಕ್ಕೂ ಮುನ್ನ ಮಾತನಾಡಿದ ಜಾಮಿಯಾ ಮಸೀದಿ ಆಡಳಿತಾಧಿಕಾರಿ ಡಾ. ನಿಸಾರ್ ಮತ್ತು ಮಹ್ಮದೀಯ ಮಸೀದಿ ಮುತುವಲ್ಲಿ ಭಾಷಾ ಅವರು, ಮಳೆ ಬಂದರೆ ಆಯಾ ಮಸೀದಿಗಳಲ್ಲಿ ಪ್ರಾರ್ಥನೆ ಮಾಡುತ್ತೇವೆ. ಮಳೆ ಬರದಿದ್ದರೆ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆಯನ್ನು ಬೆಳಿಗ್ಗೆ 9 ರಿಂದ 1ರ ಒಳಗೆ ಮಾಡಿ ಮುಗಿಸುತ್ತೇವೆ ಎಂದು ಹೇಳಿದರು.

ಪುರಸಭೆ ಸದಸ್ಯ ನಯಾಜ್, ಮಾಜಿ ಸದಸ್ಯ ಯುಸೂಫ್ ಖಾನ್ ಮಾತನಾಡಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಡಿಸಿಸಿ ಬ್ಯಾಂಕ್‌ನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಪುರಸಭೆ ಸದಸ್ಯರಾದ ಖಲೀಲ್, ಚಮನ್, ಟಿ. ಹನುಮಂತಪ್ಪ, ಪಿ.ಆರ್. ರಾಜು, ಮುಖಂಡರಾದ ಕೆ.ಪಿ. ಗಂಗಾಧರ್, ಎ.ಕೆ. ನರಸಿಂಹಪ್ಪ, ಭೋವಿಕುಮಾರ್, ಎಂ.ಬಿ. ರುಸ್ತುಂ, ದಾದಾವಲಿ, ಬಿ. ಅನ್ವರ್ ಭಾಷಾ, ಬಿ.ಎನ್. ರಫೀಕ್, ಸಿದ್ದಿಗಿ ಮಸೀದಿ ಮುತುವಲ್ಲಿ ಅಕ್ರಂ, ಕುಂಬಳೂರು ವಾಸು ಸೇರಿದಂತೆ ಇನ್ನೂ ಅನೇಕರು ಸಭೆಯಲ್ಲಿ ಭಾಗವಹಿಸಿದ್ದರು. ಪಿಎಸ್‌ಐ ರವಿಕುಮಾರ್ ಸ್ವಾಗತಿಸಿದರು.

## ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್‌ನಲ್ಲಿ ರಕ್ತದಾನ ಶಿಬಿರ



ದಾವಣಗೆರೆ, ಜು.5- ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜುಕೇಶನ್ ಕಾಲೇಜಿನಲ್ಲಿ ಶೈಕ್ಷಣಿಕ ವರ್ಷದ ಯುವ ರೆಡ್ ಕ್ರಾಸ್ ಮತ್ತು ಎನ್‌ಎಸ್‌ಎಸ್ ಘಟಕಗಳ ಸಂಯುಕ್ತಾಶ್ರಯದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ನಡೆಯಿತು. ರಕ್ತ ಗುಂಪಿನ ತಪಾಸಣೆ ಕಾರ್ಯಕ್ರಮ ಭಾರತೀಯ ರೆಡ್ ಕ್ರಾಸ್ ರಕ್ತನಿಧಿಯ ವೈದ್ಯಾಧಿಕಾರಿಗಳು ಸಿಬ್ಬಂದಿ ವರ್ಗದವರು ತಮ್ಮ ತಂಡದೊಂದಿಗೆ ಆಗಮಿಸಿ, ರಕ್ತದಾನ ಶಿಬಿರವನ್ನು ನಡೆಸಿಕೊಟ್ಟರು.

ಕಾಲೇಜಿನ ಪ್ರಾಂಶುಪಾಲ ಡಾ. ಬಿ. ವೀರಪ್ಪ ಅಧ್ಯಕ್ಷತೆ ವಹಿಸಿದ್ದರು. ಭಾರತೀಯ ರೆಡ್ ಕ್ರಾಸ್ ಘಟಕದ ಸಭಾಪತಿ ಡಾ. ಎ.ಎಂ. ಶಿವಕುಮಾರ್ ಮತ್ತು ಉಪ ಸಭಾಪತಿ ಗೌಡರ ಚನ್ನಬಸಪ್ಪ, ರಾಜ್ಯ ಸಮಿತಿ ಸದಸ್ಯ ಸಿದ್ದಣ್ಣ ಡಿ.ಎಸ್. ಪಾಲ್ಗೊಂಡಿದ್ದರು. ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿಗಳಾದ ಸಿದ್ದಲಿಂಗಪ್ಪ ಮತ್ತು ಜಿ.ಆರ್. ಸದಾಶಿವಪ್ಪ, ಯುವ ರೆಡ್ ಕ್ರಾಸ್ ಅಧಿಕಾರಿ ನವೀನ್ ಹೆಚ್ ಉಪಸ್ಥಿತರಿದ್ದರು.

## ಮಳೆ : ಏರಿದ ಭದ್ರಾ ಒಳಹರಿವು

**(1ನೇ ಪುಟದಿಂದ)** ಭದ್ರಾ ಜಲಾಶಯದ ನೀರಿನ ಮಟ್ಟ 165 ಅಡಿ ದಾಟುವ ನಿರೀಕ್ಷೆ ಹೆಚ್ಚಾಗಿದೆ. ಇತ್ತ ತುಂಗಾ ಜಲಾನಯನ ಪ್ರದೇಶದಲ್ಲಿ ವ್ಯಾಪಕ ಮಳೆ ಆಗುತ್ತಿದ್ದು, ಜಲಾಶಯಕ್ಕೆ ಒಳಬರುವ ಎಲ್ಲಾ ನೀರನ್ನು ತುಂಗಭದ್ರಾ ನದಿಗೆ ಬಿಡಲಾಗಿದೆ.

## ವಿದ್ಯಾರ್ಥಿಗಳಿಗೆ ಸಮವಸ್ತ್ರ ನೋಟ್ ಬುಕ್ ವಿತರಣೆ



ದಾವಣಗೆರೆ, ಜು.5- ಕಸ್ತೂರಿ ಬಾ ಸಮಾಜದಿಂದ ಮಾರುತಿ ಪ್ರೌಢಶಾಲೆಯ 8ನೇ ತರಗತಿ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಪೆನ್ನು, ಜ್ಯಾಮಿಟ್ರಿ ಬಾಕ್ಸ್, ನೋಟ್ ಪುಸ್ತಕಗಳು, ಸ್ಕೂಲ್ ಬ್ಯಾಗ್ ವಿತರಿಸಲಾಯಿತು. ಒಂಭತ್ತು ಮತ್ತು ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ಪೆನ್ನು ವಿತರಿಸಲಾಯಿತು.

ಅಧ್ಯಕ್ಷರಾದ ಶ್ರೀಮತಿ ಶಕುಂತಲ ಗುರುಸಿದ್ದಯ್ಯ, ಗೌರವಾಧ್ಯಕ್ಷರಾದ ಶ್ರೀಮತಿ ಸರೋಜ ಚಂದ್ರಶೇಖರ್, ಸದಸ್ಯರಾದ ಮಮತ ನಾಗರಾಜ್ ವಿದ್ಯಾರ್ಥಿಗಳ ಕುರಿತು ಮಾತನಾಡಿದರು.

ಕಾರ್ಯದರ್ಶಿ ಶ್ರೀಮತಿ ಶಶಿಕಲಾ ರುದ್ರಯ್ಯ, ಖಜಾಂಚಿ ಶ್ರೀಮತಿ ತಾರಾ ಚಿಕ್ಕೇಗೌಡರ್, ಸಹ ಕಾರ್ಯದರ್ಶಿ ಹೆಚ್.ಕೆ. ಸತ್ಯಭಾಮ ಮಂಜುನಾಥ, ಸದಸ್ಯರಾದ ಸರಳ ಅಮ್ಮೆ, ಲೀಲಾ ಮರುಳಯ್ಯ, ಶಕುಂತಲ ಜೆ.ಪಿ., ವತ್ಸಲಾ ಶಿವಮಲ್ಲಪ್ಪ, ಗಂಗಮ್ಮ ಕುಂಬಿ, ವಿನೋದ ವೇದಮೂರ್ತಿ ಉಪಸ್ಥಿತರಿದ್ದರು.

## ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದಿಂದ ಸಾಲಕ್ಕೆ ಅರ್ಜಿ

ದಾವಣಗೆರೆ, ಜು.5- ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದಿಂದ 'ಕಾಯಕ ಕಿರಣ' ಹಾಗೂ 'ಸ್ವ-ಸಹಾಯ ಸಂಘಗಳಿಗೆ ಉತ್ತೇಜನ' ಯೋಜನೆಯಡಿ ಸಾಲ, ಸಹಾಯ ಧನ ಸೌಲಭ್ಯ ಪಡೆಯಲು ಇಚ್ಚಿಸುವ ವೀರಶೈವ ಲಿಂಗಾಯತ ಸಮುದಾಯದ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿದಾರರು ಪ್ರವರ್ಗ-3 ಬಿ ವರ್ಗಕ್ಕೆ ಸೇರಿದವರಾಗಿರಬೇಕು, ಅರ್ಜಿ ಸಲ್ಲಿಸಲು ಜು.28 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತದ ಕೇಂದ್ರ ಕಛೇರಿಯ ದೂರವಾಣಿ ಸಂಖ್ಯೆ: 080-22865522 ಅಥವಾ ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ದೂರವಾಣಿ ಸಂಖ್ಯೆ: 08192-230934 ಅನ್ನು ಸಂಪರ್ಕಿಸಬಹುದು.

## ಮುಸುಕಿನ ಜೋಳದಲ್ಲಿ ಸೈನಿಕ ಹುಳುವಿನ ಬಾಧೆ ನಿರ್ವಹಣೆ

ದಾವಣಗೆರೆ, ಜು.5- ಜಿಲ್ಲೆಯಾದ್ಯಂತ ಮುಸುಕಿನ ಜೋಳದಲ್ಲಿ ಸೈನಿಕ ಹುಳುವಿನ (ಲದ್ದಿ ಹುಳು) ಬಾಧೆ ಕಾಣಿಸಿಕೊಂಡಿದ್ದು, ಹುಳುಗಳು ಎಲೆಗಳನ್ನು ಕೆರೆದು ತಿನ್ನುವುದರಿಂದ ನೀಳವಾದ, ಚಿಂದಿಯಂತಾದ ರಂಧ್ರಗಳು ಕಾಣಿಸಿಕೊಳ್ಳುತ್ತವೆ. ಎಲೆ ಸುಳಿಯನ್ನು ತಿಂದು ಹಾಳು ಮಾಡುತ್ತವೆ. ಆ ಸುಳಿಯಲ್ಲಿ ತೇವದಿಂದ ಕೂಡಿದ ಕಂದು ಬಣ್ಣದ ಹಿಕ್ಕೆಗಳನ್ನು ಕಾಣಬಹುದಾಗಿದ್ದು, ರೈತರು ಮುಂಜಾಗ್ರತಾ ಕ್ರಮ ವಹಿಸಬಹುದು.

**ನಿರ್ವಹಣಾ ಕ್ರಮ:** ಮೊಟ್ಟೆಗಳ ಗುಂಪು ಹಾಗೂ ಮೊದಲ ಹಂತದ ಮರಿಗಳಿರುವ ಎಲೆಗಳನ್ನು ಕಿತ್ತು ನಾಶಪಡಿಸುವುದು. ಹೊಲದಲ್ಲಿ ಅಲ್ಲಲ್ಲಿ ಕವಲೊಡೆದ ರೆಂಬೆಗಳನ್ನು ನೆಟ್ಟು ಪಕ್ಷಿಗಳನ್ನು ಆಕರ್ಷಿಸುವುದು. ಮೊಟ್ಟೆಗಳ ಪರತಂತ್ರ ಜೀವಿಯಾದ ಟ್ರೈಕೊಗ್ರಾಮ ಪ್ರೀಟಿಯೋಸಂನ್ನು ಎಕರೆಗೆ 50 ಸಾವಿರ ಮೊಟ್ಟೆಗಳಂತೆ ನಿರ್ಧರಿತ ಅಂತರದಲ್ಲಿ ಬಿಡುವುದು.

ಲದ್ದಿ ಹುಳುವಿನಿಂದ ಶೇ. 10 ರಷ್ಟು ಹಾನಿಯಾಗಿದ್ದಲ್ಲಿ ಶೇ. 5ರ ಬೇವಿನ ಕಷಾಯ (ಅಜಾಡಿರೆಕ್ಟಿನ್ 1500 ಪಿಪಿಎಂ)ವನ್ನು 5 ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು. ಶೇ. 20 ರಷ್ಟು ಹಾನಿಯಾಗಿದ್ದಲ್ಲಿ 0.4 ಗ್ರಾಂ. ಎಮಾಮೆಕ್ಟಿನ್ ಬೆನ್‌ಜೊಯೇಟ್ 5% ಎಸ್.ಜಿ. ಅಥವಾ 0.3 ಮಿ.ಲೀ. ಸ್ಪೈನೊಸಾಡ್ 4 ಎಸ್.ಸಿ. ಅಥವಾ 2 ಗ್ರಾಂ. ಥೈಯೋಡಿಕಾರ್ಬನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯನ್ನು ಸಂಪರ್ಕಿಸಬಹುದು ಎಂದು ದಾವಣಗೆರೆ ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ರಾಣೇಬೆನ್ನೂರು, ಜು. 5 - ನಗರದ ಶ್ರೀ ಗಂಗಾ ವಿವಿಧ ಉದ್ದೇಶಗಳ ಸಹಕಾರ ಸಂಘದ ವತಿಯಿಂದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.95%ರಷ್ಟು ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಗಂಗಾ ವಿವಿಧ ಉದ್ದೇಶಗಳ ಸಹಕಾರ ಕಚೇರಿಯಲ್ಲಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಆಗಸ್ಟ್ 5 ರಂದು ಕೊನೆಯ ದಿನ. ವಿವರಕ್ಕೆ ಸಂಪರ್ಕಿಸಿ : 08373-261208, 9448679770.

## ಗ್ರಾಹಕರಿಗಾಗಿ ಮತ್ತೊಮ್ಮೆ ರೆಡಿಮೇಡ್ ಬಟ್ಟೆ ಸೇಲ್ಸ್



ದಾವಣಗೆರೆ, ಜು. 5- ನಗರದ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಅತೀ ದೊಡ್ಡ ರಿಯಾಯಿತಿ ದರದಲ್ಲಿ ಬ್ರ್ಯಾಂಡೆಡ್ ಸಿದ್ಧ ಉಡುಪುಗಳ ಮಾರಾಟ ಮರು ಪ್ರಾರಂಭಗೊಂಡಿದೆ.

ವಿವಿಧ ಪ್ರಕಾರಗಳ ಜೇಂಟ್ಸ್, ಲೇಡಿಸ್ ಮತ್ತು ಕಿಡ್ಸ್, ಪ್ಯಾಂಟ್ ಟೀ-ಶರ್ಟ್, ಲೋವರ್, ಟಾಪ್, ಬರ್ಮುಡಾ, ಶರ್ಟ್, ಪ್ಯಾಂಟ್, ಬಿಗ್ ಬ್ರ್ಯಾಂಡ್ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್, ರಾಜಸ್ಥಾನಿ ರಾಯಲ್ ಪ್ರಿಂಟೆಡ್ ಬೆಡ್‌ಶೀಟ್ಸ್, ಫಿಲೋ ಕವರ್, ಸೋಫಾ ಕವರ್ ಲಭ್ಯವಿದೆ.

## ವಾಸ್ತು ತಜ್ಞ ಗುರೂಜಿ ಭೀಕರ ಹತ್ಯೆ

**(1ನೇ ಪುಟದಿಂದ)** ಸಂಖ್ಯೆಯ ರೂಮ್ ಬುಕ್ ಮಾಡಿದ್ದರು. ನಾಳೆಯೇ ಅವರು ರೂಮ್ ಚೆಕ್‌ಔಟ್ ಮಾಡಬೇಕಿತ್ತು. ಸೋಮವಾರ 12.43 ರ ಸುಮಾರು ಚಂದ್ರಶೇಖರ್ ಗುರೂಜಿ ಅವರನ್ನು ವಾಸ್ತು ಸಲಹೆ ನೆಪದಲ್ಲಿ ಭೇಟಿಯಾಗಲು ಬಂದ ಇಬ್ಬರು ಈ ಕೃತ್ಯ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಕೃತ್ಯ ನಡೆಯುವ ವೇಳೆ ಗುರೂಜಿ ಪಕ್ಕ ಒಬ್ಬ ಯುವತಿ ಕೂಡ ಕುಳಿತುಕೊಂಡಿದ್ದರು. ಹಂತಕರು ಗುರೂಜಿ ಮೇಲೆ ದಾಳಿ ಮಾಡಿದ ತಕ್ಷಣ ಆ ಮಹಿಳೆ ಕಿರುಚಿಕೊಂಡು ಓಡಿ ಹೋಗಿದ್ದಾರೆ. ಹೋಟೆಲ್‌ನ ಸ್ವಾಗತಕಾರರು ಕೂಡ ಘಟನೆಗೆ ಗಾಬರಿಗೊಂಡು ಮೂಕಪ್ರೇಕ್ಷಕರಾಗಿದ್ದು ಸಿಸಿಟಿವಿಯಲ್ಲಿ ದಾಖಲಾಗಿದೆ.

ಸರಳ ವಾಸ್ತು ತಜ್ಞ ಚಂದ್ರಶೇಖರ ಗುರೂಜಿ ಅವರ ಎದೆಯ ಭಾಗಕ್ಕೆ 35 ರಿಂದ 40 ಕಡೆಗಳಲ್ಲಿ ಚಾಕುವಿನಿಂದ ದುಷ್ಕರ್ಮಿಗಳು ಇರಿದಿದ್ದು, ಕುತ್ತಿಗೆ ಬಲ ಭಾಗವನ್ನು ಕತ್ತರಿಸಿದ್ದಾರೆ. ಇದೊಂದು ಭೀಕರವಾದ ಹತ್ಯೆ ಎಂಬುದು ಸಿಸಿಟಿವಿ ದೃಶ್ಯಾವಳಿಗಳಿಂದ ತಿಳಿದು ಬರುತ್ತಿದೆ.

ಹತ್ಯೆ ಗುಂಪಿನಲ್ಲಿ ಇದ್ದ ವ್ಯಕ್ತಿಯೊಬ್ಬ ಗುರೂಜಿ ಕಾಲಿಗೆ ಬಿದ್ದು ನಮಸ್ಕಾರ ಮಾಡುತ್ತಿದ್ದಂತೆ ಮತ್ತೊಬ್ಬ ವ್ಯಕ್ತಿ ಅವರ ಎದೆಗೆ ಇರಿದಿದ್ದಾನೆ. ಅವರು ನೆಲಕ್ಕೆ ಬೀಳುತ್ತಿದ್ದಂತೆ ಮತ್ತೊಬ್ಬ ವ್ಯಕ್ತಿ ಕೂಡ ಬೆನ್ನಿಗೆ ಚೂರಿಯಿಂದ ಇರಿದಿದ್ದಾನೆ. ಜತೆಗೆ ಕುತ್ತಿಗೆಯ ಬಲಭಾಗ ಕತ್ತರಿಸುವಂತೆ ಚಾಕುವಿನಿಂದ ಇರಿಯಲಾಗಿದೆ.

'ಸರಳ ವಾಸ್ತು' ಎನ್ನುವ ಪರಿಕಲ್ಪನೆಯೊಂದಿಗೆ ಸಾಕಷ್ಟು ಜನ ಮನ್ನಣೆ ಗಳಿಸಿದ್ದ ಚಂದ್ರಶೇಖರ್ ಗುರೂಜಿ ಬಾಗಲಕೋಟೆ ನಗರದ ಮೋಟಗಿ ಗಲ್ಲಿಯ ನಿವಾಸಿಯಾಗಿದ್ದರು. ಬಾಗಲಕೋಟೆಯ ಬಸವೇಶ್ವರ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬಿಇ ವ್ಯಾಸಂಗ ಮಾಡಿದ್ದರು. ಹುಬ್ಬಳ್ಳಿಯ ವಿದ್ಯಾನಗರದಲ್ಲಿ ನಿವಾಸ ಹೊಂದಿದ್ದರು. ಸಿವಿಲ್ ಎಂಜಿನಿಯರಿಂಗ್ ವ್ಯಾಸಂಗ ಮುಗಿಸಿ ಆರಂಭದಲ್ಲಿ ಕಟ್ಟಡ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದ ಅವರು, ನಂತರ ಸರಳ ವಾಸ್ತು ಆರಂಭಿಸಿದ್ದರು.


**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ : 63647 83999

**ಬೇಕಾಗಿದ್ದಾರೆ**
ಹೊಳಲ್ಕೆರೆ ತಾಲ್ಲೂಕು ಹೆಚ್.ಡಿ ಪುರದ ಅಡಿಕೆ ತೋಟದಲ್ಲಿ ಕೆಲಸ ಮಾಡಲು ಒಂದು ಕುಟುಂಬದವರು ಬೇಕಾಗಿದ್ದಾರೆ. ಸಂಪರ್ಕಿಸಿ.
94484 39639

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ಮಾರಾಟಕ್ಕೆ**
ಆಂಜನೇಯ ಬಡಾವಣೆಯಲ್ಲಿ 52x40., P.J extn 40x60, MCC A Block 44x60, ಗ್ಲಾಸ್ ಹೌಸ್ - 30x50 ಸೈಟ್ಸ್, ವಿವೇಕಾನಂದ ಬಡಾವಣೆ 30x50, (ಶಿವ-ಪಾರ್ವತಿ - ಡಾಲರ್ಸ್ ಕಾಲೋನಿ ಸೈಟ್ಸ್ ಹೌಸಸ್) ರಶ್ಮಿ & ಎಸ್.ಎಸ್. ಲೇಔಟ್- Govt. Employes layout- ಸೈಟ್ಸ್.
76765 58585
Veeresh

**Translation Classes**
PSI ಇತರೆ Examsಗಾಗಿ
ಸಂಪರ್ಕಿಸಿ : 88925 59549

**ಬಾಡಿಗೆಗೆ ಇದೆ**
ದಾವಣಗೆರೆ ಹದಡಿ ಮುಖ್ಯರಸ್ತೆ, ಟಿ.ವಿ.ಎಸ್. ಶೋ ರೂಂ ಪಕ್ಕ, ಉದಯ ಮಾರ್ಟ್ (ವಾಣಿ ರೈಸ್ ಮಿಲ್) ಎದುರು, ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಸುಸಜ್ಜಿತವಾದ ಮಳಿಗೆ 1ನೇ ಮಹಡಿ ಎಲ್ಲಾ ರೀತಿಯ ವ್ಯಾಪಾರಗಳಿಗೆ ಯೋಗ್ಯವಾದ 1104 ಅಡಿಗಳು ಹಾಗೂ 3250 ಅಡಿ ಸೆಲ್ಲರ್ ಬಾಡಿಗೆಗೆ ಇದೆ. ಮತ್ತು 4508 ಮೇಲ್ಛಾವಣಿ ಖಾಲಿ ಜಾಗ ಬಾಡಿಗೆಗೆ ಇದೆ.
96205 95579, 87924 53686

**ಕೆಲಸಕ್ಕೆ ಬೇಕಾಗಿದ್ದಾರೆ**
ನಿರ್‌ವಿನ್ಸ್ ಕೆಫೆಯಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ. ವಯಸ್ಸು - 18 ರಿಂದ 30. ಬೇಕರಿಯಲ್ಲಿ ಕೆಲಸ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ, ಪಿಯುಸಿ ಪಾಸ್ / ಫೇಲ್ ಸ್ಥಳ :ಆಂಜನೇಯ ಬಡಾವಣೆ, ದಾವಣಗೆರೆ. ಹೆಚ್ಚಿನ ಮಾಹಿತಿಗಾಗಿ
93804 69079

**ಮನೆ, ಕಾಂಪ್ಲೆಕ್ಸ್ ಮಾರಾಟಕ್ಕೆ ಇದೆ**
ಬಾಲಾಜಿ ಬಡಾವಣೆಯಲ್ಲಿ 30x50 ಕಾರ್ನರ್ ಸೈಟ್‌ನಲ್ಲಿ ನೆಲಮಹಡಿಯಲ್ಲಿ ಮಳಿಗೆ. ಮೊದಲನೇ ಮಹಡಿಯಲ್ಲಿ 2 ಬೆಡ್ ರೂಂ ಮನೆ ಮಾರಾಟಕ್ಕೆ ಇದೆ.
98448 82366

**2BHK ಫ್ಲಾಟ್ ಮಾರಾಟಕ್ಕಿದೆ**
2 BHK ಫ್ಲಾಟ್ ಮಾರಾಟಕ್ಕಿದೆ. ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
96863 96992
99001 18054

**ಮನೆ ಬಾಡಿಗೆಗೆ ಇದೆ**
ಶ್ರೀ ಸಿದ್ಧಗಂಗಾ ಶಾಲೆಯ ಹಿಂಭಾಗದ ಸಿದ್ದಲಿಂಗೇಶ್ವರ ಬಡಾವಣೆ ದಾವಣಗೆರೆ -4 ರೋಡಿನಲ್ಲಿ ಮೊದಲ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ, ದೊಡ್ಡ ಹಾಲ್ ಮತ್ತು ನಲ್ಲಿ ನೀರು, ಬೋರ್ ನೀರು ಹೊಂದಿರುವ ಮನೆ ಬಾಡಿಗೆಗೆ ಇದೆ. ವಿಚಾರಿಸಿ. ಡೋ. ನಂ. 1725/58-A ಬಸವ ಕೃಪಾ
98446 79248

**ಹೊಲ ಮಾರಾಟಕ್ಕಿದೆ**
ದಾವಣಗೆರೆಯಿಂದ 15 ಕಿ.ಮೀ ದೂರದಲ್ಲಿ ರಾಗಿಮಸಲವಾಡ - ಸಿಂಗ್ರಳ್ಳಿ ಮಧ್ಯ ಮೇನ್ ರೋಡ್‌ಗೆ ಮುಕ್ಕಾಲು ಎಕರೆ ಹೊಲ ಮಾರಾಟಕ್ಕಿದೆ. 12,50000ಕ್ಕೆ
96638 69555

**ಮನೆ ಬಾಡಿಗೆಗೆ ಇದೆ**
ಜಯನಗರದ ಸಾಯಿ ದೇವಸ್ಥಾನ ಹಿಂಭಾಗ ಕೆಳಗಿನ ಮನೆ (ನೆಲ ಮಹಡಿ) ಡಬಲ್ ಬೆಡ್ ರೂಮ್ ಬಾಡಿಗೆಗೆ ಇದೆ. ವಿಚಾರಿಸಿರಿ
97311 60922 80730 12526
(ಸಸ್ಯಹಾರಿಗಳಿಗೆ ಮಾತ್ರ)

**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು, ಕೊಟ್ಟೂರು ರಸ್ತೆ, ಚಿಗಟೇರಿ ಸರ್ಕಲ್ ಹತ್ತಿರದ ಲೋಲೇಶ್ವರ ಗ್ರಾಮದ ರಿ.ಸ.ನಂ.199/1, ಮೂರು ಎಕರೆ ಖುಷ್ಕಿ ಜಮೀನು ಮಾರಾಟಕ್ಕಿದೆ.
Honnurswamy Vanjre
87926 04196

**WANTED**
Banking sector tele caller (Female Only)
Qualification - Any degree / PUC
No. 2257/5 2nd Floor, MCC `A' Block Beside Togataveera Kalyana Mantapa
96869 56142
Interview time : 11 AM

**ಪ್ರವೇಶ ಪ್ರಕಟಣೆ**
ಡಿಪ್ಲೊಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಬೇಕಾಗಿದ್ದಾರೆ**
ಐಟಿಐ ಫಿಟ್ಟರ್‌ಗಳು, ವೆಲ್ಡರ್ ಗಳು, ಹೆಲ್ಪರ್‌ಗಳು, ಮಾರ್ಕೆಟಿಂಗ್ ಎಕ್ಸಿಕ್ಯುಟಿವ್‌ಗಳು ಬೇಕಾಗಿದ್ದಾರೆ. ಅನುಭವವುಳ್ಳವರು / ಇಲ್ಲದವರು ಸಂಪರ್ಕಿಸಿ.
ವಿಶ್ವಾಸ್ ಸೈಂಟಿಫಿಕ್ ಕಂ.
ಹದಡಿ ರಸ್ತೆ, ದಾವಣಗೆರೆ.
ಮೊ : 99860 06349

**Work From Home**
Male/ Female,
Full / Part time Hand writing work. Small to Capital Letter.
Earn Per Month. 10,000/- to 12,000/-
Calling time 10 AM to 7 PM
89718 52431

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ.**
ಹರಿಹರದ ಕಡೆ ಹೋಗುವ ಪಿ.ಬಿ. ರೋಡ್‌ಗೆ ನೇರ ಸಂಪರ್ಕವಿರುವ ಒಳ ರಸ್ತೆಗೆ ಕಮರ್ಷಿಯಲ್ ಅಥವಾ ಇಂಡಸ್ಟ್ರಿಯಲ್ ಮಾಡಿಕೊಳ್ಳಲು ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ:
97424 34049

**ದೋಸೆ ಭಟ್ಟರು ಬೇಕಾಗಿದ್ದಾರೆ**
ಸಂಪರ್ಕಿಸಿ
70190 51306

BASIC - 400/-
DTP - 400/-
TALLY - 900/-
(ಆಧಾರ್ ಉಳ್ಳವರಿಗೆ ಮಾತ್ರ)
97426 10385

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
BA B.Ed (kannada major) ಅನುಭವಿ ಶಿಕ್ಷಕಿಯರು ಬೇಕಾಗಿದ್ದಾರೆ.
ACM School
Devaraj Urs badavane. C block. Davanagere
89703 21855, 82965 02675

**ಮನೆ ಬಾಡಿಗೆಗೆ ಇದೆ**
ಕೆ.ಬಿ. ಬಡಾವಣೆ, ತ್ರಿಶೂಲ್ ಟಾಕೀಸ್ ರೋಡಿನಲ್ಲಿ ಉತ್ತರ ದಿಕ್ಕಿನ, ವಾಸ್ತು ಪ್ರಕಾರ, 3BHK, ಮನೆ 2nd ಫ್ಲೋರ್‌ನಲ್ಲಿ ಬಾಡಿಗೆಗೆ ಇದೆ. (ಆಫೀಸ್‌ಗೂ ಸಹ ಇದೆ)
94483 39231, 77951 49297

**ಮಾರಾಟಕ್ಕಿವೆ**
ಹೈಸ್ಕೂಲ್ ಮೈದಾನದ ಪದವಿ ಪೂರ್ವ ಕಾಲೇಜಿನ ಕಟ್ಟಡದ ಹಳೇಕಲ್ಲು ಬಂಡೆಗಳು ಮತ್ತು ಕಡಪಾ ಕಲ್ಲುಗಳು ಮತ್ತು ಮರದ ಹಳೆ ಬೀರುಗಳು, ಕುರ್ಚಿಗಳು ಮಾರಾಟಕ್ಕಿವೆ. ಸಂಪರ್ಕಿಸಿ :
99726 75765, 99452 56881

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree, Pharmacy & BHMS (Government & Private Collage)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಆಂಡ್ ಕೋ ಸರ್ಕಲ್, ದಾವಣಗೆರೆ.
87620 58369, 90080 67049

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೊರಿಯರ್ ಸೌಲಭ್ಯವಿದೆ.
91084 18233, 97432 17566

**COMMERCIAL SITE FOR SALE**
B.I.E.T. ROAD, CORNER SITE, OPPOSITE HEMAVATHI HOSTEL, TOTAL MEASUREMENT 3200/SQ. FEETS.
CONTACT NO.
97424 34049

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಂಸಿಸಿ 'ಬಿ' ಬ್ಲಾಕ್ ಬಾಪೂಜಿ ಹೈಸ್ಕೂಲ್ ಹತ್ತಿರ ಗ್ರೌಂಡ್‌ಫ್ಲೋರ್‌ನಲ್ಲಿ ಮನೆ, ಬೋರ್‌ವೆಲ್ ಹಾಗೂ ಕಾರ್ಪೋರೇಷನ್ ನೀರಿನ ಸೌಲಭ್ಯವಿರುವ ಮತ್ತು ಕಾರ್ ಪಾರ್ಕಿಂಗ್ ಇರುವ 2BHK ಮನೆ ಬಾಡಿಗೆಗೆ ಇದೆ.
63638-32495, 94811-61164

**ಸಾಲಗಳಿಗಾಗಿ ಸಂಪರ್ಕಿಸಿ**
ಕಡಿಮೆ ಬಡ್ಡಿ ದರದಲ್ಲಿ ಮನೆ ಕಟ್ಟಲು, ಮನೆ ತೆಗೆದುಕೊಳ್ಳಲು, ಸೈಟ್ ಖರೀದಿ, ಮನೆ ಅಡಮಾನ ಬೇರೆ ಬ್ಯಾಂಕಿನ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಪರ್ಸನಲ್ ಲೋನ್ ಮತ್ತು ವ್ಯವಹಾರ ಸಾಲಗಳಿಗಾಗಿ ಸಂಪರ್ಕಿಸಿ :
99455 22287

**ಶಿಕ್ಷಕಿಯರು ಬೇಕಾಗಿದ್ದಾರೆ**
PUC, B.A, B.Com, B.Ed, D.Ed ಆದ ಶಿಕ್ಷಕಿಯರು ಬೇಕಾಗಿದ್ದಾರೆ.
Kalpatharu English Medium School,
Nittuvalli, Davangere.
78999 32079, 9164764525

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಪ್ರವೇಶ ಪ್ರಕಟಣೆ 2022-23**
ಹೆಲ್ತ್ ಇನ್ಸ್‌ಪೆಕ್ಟರ್ DHI
ಲ್ಯಾಬ್ ಟೆಕ್ನಾಲಜಿ DMLT
ಇಮೇಜಿಂಗ್ ಟೆಕ್ನಾಲಜಿ X-ray
ಆಪರೇಷನ್ ಟೆಕ್ನಾಲಜಿ DOT
ಡಿಪ್ಲೋಮೋ ಫಾರ್ಮಸಿ D pharm
ಕೆಲವೇ ಸೀಟುಗಳು ಮಾತ್ರ
ಎಲ್ಲ ವಿದ್ಯಾರ್ಥಿಗಳಿಗೂ ಸ್ಕಾಲರ್‌ಶಿಪ್ ಸೌಲಭ್ಯವಿದೆ, ಹಾಸ್ಟೆಲ್ ಸೌಲಭ್ಯವಿದೆ.
VS PARAMEDICAL COLLEGE, DAVANAGERE.
8553278258
9019580600

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಮತ್ತು ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಸೌಲಭ್ಯವಿದೆ. ಸಂಬಳ 7000-11000 ವಿನೋಬ ನಗರ 3ನೇ ಮೇನ್, 1ನೇ ಕ್ರಾಸ್, ದಾವಣಗೆರೆ.
+91 88678 53961
91130 53483, 97437 56647

**ಬಾಡಿಗೆಗೆ / ಲೀಸ್‌ಗೆ ಇದೆ**
ಎಂಸಿಸಿ 'ಬಿ' ಬ್ಲಾಕ್ 8ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಮೊದಲನೇ ಮಹಡಿ 2BHK ಉತ್ತರ ದಿಕ್ಕು Rent / Lease.
94483 39448
Only for Veg

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್‌ಗಳು ಬೇಕಾಗಿದ್ದಾರೆ. ವಸತಿ ವ್ಯವಸ್ಥೆ ಇರುತ್ತದೆ.
ಸಂಪರ್ಕಿಸಿ : ಪಿ.ಜೆ.ಬಡಾವಣೆ, ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
ಮೊ: 98450-35710
99024-52312

**ರೂಮ್ ಬಾಡಿಗೆಗೆ ದೊರೆಯುತ್ತವೆ**
ಜಯನಗರ 'ಎ' ಬ್ಲಾಕ್‌ನಲ್ಲಿ 12x12 ವಿಸ್ತೀರ್ಣದ ಫರ್ನಿಚರ್ ಸೌಲಭ್ಯವಿರುವ ರೂಂ ಬಾಡಿಗೆಗೆ ದೊರೆಯುತ್ತವೆ.
M : 94484 39639

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಅಡಿಕೆ ತೆಂಗು , ಮಾವು ಸಪೋಟ, ಶ್ರೀಗಂಧ, ಹೆಬ್ಬೇವು, ಮಹಾಘನಿ, ನಿಂಬೆ, ದಾಳಿಂಬೆ, ಗುಲಾಬಿ ಇನ್ನಿತರೆ ಗಿಡಗಳು ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ. ಸಂಪರ್ಕಿಸಿ.
94484 39639

**ಸೈಟು ಮಾರಾಟಕ್ಕಿದೆ**
ನಿಟುವಳ್ಳಿಯಿಂದ S S ಹೈಟೆಕ್ ಆಸ್ಪತ್ರೆಗೆ ಹೋಗುವ ದಾರಿಯಲ್ಲಿರುವ ಪೆಟ್ರೋಲ್ ಬಂಕ್ ಪಕ್ಕದಲ್ಲಿರುವ ಸೈಟ್ 37.5x90 = 3354 Sq.ft ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
81973 00410

**PG AVAILABLE**
Ladies P.G is Available with all the facilities. Near to BIET College, only 4 Sharing, & 2 Sharing
Contact : 99025 03129

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು ದಿ. 06.07.2022ರ ಬುಧವಾರ ಮತ್ತು ನಾಳೆ ದಿ.07.07.2022ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**12A, 80G CSR & NEETHI AYOGA**
ರಿಜಿಸ್ಟ್ರೇಷನ್ನನ್ನು ಅತೀ ಕಡಿಮೆ ಫೀಸ್ & ಅವಧಿಯಲ್ಲಿ ಮಾಡಿಕೊಡಲಾಗುತ್ತದೆ.
86181 29962, 99025 03129

**ಬೇಕಾಗಿದ್ದಾರೆ**
1. Mechanic & Assistant Mechanic
Qualification : ITI Diesel / Fitter
2. Driver
Eicher Trucks & Buses Workshop
ಸಂಪರ್ಕಿಸಿ: ವಿಜಯ ಆಟೋ ಸೇಲ್ಸ್ ಅಂಡ್ ಸರ್ವೀಸ್, ಪಿ.ಬಿ.ರೋಡ್, ದಾವಣಗೆರೆ.
94480 70098

**ಹೆಸರು ಸ್ಪಷ್ಟೀಕರಣ**
ದಾದು ಯಾನೆ ಗುಲಾಂ ಮುಸ್ತಾಫಾ ಸಿ. ಬಿನ್ ಎ. ಚಮನ್ ಸಾಬ್, ಮ.ನಂ. 770, 6ನೇ ಕ್ರಾಸ್, ಆಂಜನೇಯ ಬಡಾವಣೆ ವಾಸಿಯಾದ ನನ್ನ ಹೆಸರು ಆಧಾರ್ ಕಾರ್ಡ್‌ನಲ್ಲಿ ಗುಲಾಂ ಮುಸ್ತಾಫಾ ಸಿ. ಎಂದು ಹಾಗೂ ವಂಶ ವೃಕ್ಷ ಪ್ರಮಾಣ ಪತ್ರದಲ್ಲಿ ದಾದು ಎಂದು ನಮೂದಾಗಿದ್ದು, ಈ ಮೇಲ್ಕಂಡ ಎರಡೂ ಹೆಸರುಗಳು ನನ್ನವೇ ಆಗಿವೆ ಎಂದು ದಿನಾಂಕ : 04.05.2022ರಂದು ದಾವಣಗೆರೆ ನೋಟರಿಯವರ ಮುಂದೆ ಪ್ರಮಾಣೀಕರಿಸಿದ್ದೇನೆ.
ಸಹಿ- ದಾದು ಯಾನೆ ಗುಲಾಂ ಮುಸ್ತಾಫಾ ಸಿ.

**RECEPTIONSIT**
CUM COMPUTER OPERATOR.
Any Diploma In Computer Science With Computer Skills.
Lab Technician : Diploma Lab Tecnician (DLT) Diploma Can Apply.
CONTACT : 98440 65638

ಓಂ ಶ್ರೀ ಸಾಯಿ ಅನ್ನಪೂರ್ಣೇಶ್ವರಿ ಜ್ಯೋತಿಷ್ಯಾಲಯ
**ನೀವು ತುಂಬಾ ನೊಂದಿದ್ದೀರಾ?**
ಗಂಡ ಹೆಂಡತಿ ಕಲಹ, ಪ್ರೀತಿಯಲ್ಲಿ ನಂಬಿ ಮೋಸ, ಸ್ತ್ರೀ ಪುರುಷ ವಶೀಕರಣ, ವ್ಯಾಪಾರದಲ್ಲಿ ನಷ್ಟ, ಲೈಂಗಿಕ ಸಮಸ್ಯೆ, ಸಾಲಬಾಧೆ, ಮನೆಯಲ್ಲಿ ಅಶಾಂತಿ. 100% ಪರಿಹಾರ ಶತಸಿದ್ಧ.
ಪಂಡಿತ್ ಆನಂದ ಗುರೂಜಿ
96064 23948

## ಲಕ್ಷ್ಮಿ ಸೊಸೈಟಿಯಲ್ಲಿ ಹಣ ದುರುಪಯೋಗ ಆರೋಪ : ಮುತಾಲಿಕ್ ಅವರಿಗೆ ಮನವಿ



ದಾವಣಗೆರೆ, ಜು. 5- ನಗರದ ಲಕ್ಷ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯು ಬಡಜನರ ಕೋಟಿಗಟ್ಟಲೆ ಹಣ ದುರುಪಯೋಗ ಮಾಡಿಕೊಂಡಿದ್ದು, ಈಚೆಗೆ ನಗರಗಕ್ಕಾಗಮಿಸಿದ್ದ ಶ್ರೀ ರಾಮಸೇನೆ ಹಿಂದೂ ಹೋರಾಟಗಾರ ಪ್ರಮೋದ್ ಮುತಾಲಿಕ್ ಅವರಿಗೆ ಸೊಸೈಟಿಯ ಠೇವಣಿದಾರರ ಸಂಘದಿಂದ ಮನವಿ ಸಲ್ಲಿಸಲಾಯಿತು.

# ಬಳಕೆಯಾಗದ ವಾಹನ, ಪರಿಕರಗಳು; ನಿರ್ಲಕ್ಷ್ಯಕ್ಕೆ ವಿಪಕ್ಷ ಆಕ್ರೋಶ



ದಾವಣಗೆರೆ, ಜು.5- ಸರ್ಕಾರದ ಅನುದಾನದಿಂದ ಬಂದಿರುವ ಕೋಟ್ಯಂತರ ರೂ. ವೆಚ್ಚದ ವಾಹನಗಳು ಹಾಗೂ ಪರಿಕರಗಳು ತುಕ್ಕು ಹಿಡಿಯುತ್ತಿದ್ದು, ಮಹಾನಗರ ಪಾಲಿಕೆ ಆಡಳಿತ ವರ್ಗದ ನಿರ್ಲಕ್ಷ್ಯಕ್ಕೆ ಪಾಲಿಕೆ ವಿರೋಧ ಪಕ್ಷದ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಂಗಳವಾರ ಪಾಲಿಕೆ ವಿಪಕ್ಷ ನಾಯಕ ಜಿ.ಎಸ್. ಗಡಿಗುಡಾಳ್ ಮಂಜುನಾಥ್ ಪಾಲಿಕೆಯ ವಾಹನಗಳನ್ನು ಇಟ್ಟಿರುವ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿ, ಎಲೆಕ್ಟ್ರಿಕಲ್ ಆಟೋಗಳು, ಮುಕ್ತಿವಾಹಿನಿ, ಮಿನಿ ಹಿಟಾಚಿ ಕೊಂಡೊಯ್ಯುವ ಲಾರಿ, ಜಟ್ಟಿಂಗ್ ಸ್ಪ್ರೇ, ಕಸ ತುಂಬುವ ಕಾಂಪ್ಯಾಕ್ಟರ್, ತಳ್ಳು ಗಾಡಿಗಳು, ಕಾರ್ಡನ್ ಡಸ್ಟ್ ಸೇರಿದಂತೆ ಪರಿಕರಗಳು ಮಹಾನಗರ ಪಾಲಿಕೆಗೆ ಬಂದಿವೆ. ಆದರೆ ಬಳಕೆ ಮಾಡುವುದನ್ನು ಬಿಟ್ಟು ಪಾಲಿಕೆಯಲ್ಲಿ ಇಟ್ಟಿರುವುದು ಆಡಳಿತ ನಡೆಸುತ್ತಿರುವ ಬಿಜೆಪಿ ಬೇಜವಾಬ್ದಾರಿತನಕ್ಕೆ ಸಾಕ್ಷಿ ಎಂದು ಆಡಳಿತ ಪಕ್ಷದವರ ವಿರುದ್ಧ ಗುಡುಗಿದರು.

13 ಎಲೆಕ್ಟ್ರಿಕಲ್ ಟಿಪ್ಪರ್ ಆಟೋಗಳು ವಾರ್ಡ್‌ಗಳಿಗೆ ಬರುತ್ತಿಲ್ಲ. ಚಾಲನೆಯಲ್ಲಿಯೂ ಇಲ್ಲ. ಕಾರ್ಪೊರೇಷನ್‌ನಲ್ಲಿಯೇ ತುಕ್ಕು ಹಿಡಿಯುತ್ತಿವೆ. 11 ಕಸ ತುಂಬುವ ಕಾಂಪ್ಯಾಕ್ಟರ್‌ಗಳ ಪೈಕಿ 4 ರಿಪೇರಿಯಲ್ಲಿದ್ದರೆ, ಎರಡು ಗ್ಯಾರೇಜ್‌ನಲ್ಲಿವೆ. ಎರಡು ವರ್ಷಗಳಾದರೂ ಸರಿಪಡಿಸುವ ಕೆಲಸ ಮಾಡದಿರುವುದು ವಿಪರ್ಯಾಸದ ಸಂಗತಿ. 160 ತಳ್ಳು ಗಾಡಿಗಳು ವರ್ಷ ಕಳೆಯುತ್ತಾ ಬಂದರೂ ಉಪಯೋಗ ಮಾಡಿಕೊಂಡಿಲ್ಲ. ತುಕ್ಕು ಹಿಡಿಯುವ ಹಂತದಲ್ಲಿವೆ. ಒಟ್ಟಿನಲ್ಲಿ ಕೋಟ್ಯಂತರ ರೂಪಾಯಿ ವ್ಯಯಿಸಿ, ತರಿಸಿರುವ ವಾಹನಗಳನ್ನು ಸದ್ಬಳಕೆ ಮಾಡಿಕೊಳ್ಳುತ್ತಿಲ್ಲ. ಇಲ್ಲಿ ಉಪಯೋಗಕ್ಕೆ ಬಾರದಿದ್ದರೆ ಮಾರಾಟ ಮಾಡಲಿ. ಇಲ್ಲದಿದ್ದರೆ ಜನರಿಗೆ ಉಚಿತವಾಗಿ ನೀಡಲಿ. ಹಾಳಾಗುವ ಬದಲು ಜನರ ಅನುಕೂಲಕ್ಕಾದರೂ ಆಗುತ್ತದೆ ಎಂದು ಹೇಳಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಆಗುತ್ತಿಲ್ಲ. ಜೊತೆಗೆ ಸರ್ಕಾರದಿಂದ ಬಂದಿರುವ ವಾಹನಗಳು, ಸಲಕರಣೆಗಳನ್ನು ಬಳಸಿಕೊಂಡು ಜನರ ಸಮಸ್ಯೆಗಳಿಗೆ ಸ್ಪಂದಿಸದ ಈ ಆಡಳಿತ ವರ್ಗಕ್ಕೆ ಜನರು ಪಾಠ ಕಲಿಸುವ ದಿನಗಳ ದೂರ ಇಲ್ಲ ಎಂದು ಮಂಜುನಾಥ್ ಆಕ್ರೋಶ ಹೊರಹಾಕಿದ್ದಾರೆ.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ಎ. ನಾಗರಾಜ್, ಸ್ಥಾಯಿ ಸಮಿತಿ ಅಧ್ಯಕ್ಷ ಉದಯಕುಮಾರ್, ಕಾಂಗ್ರೆಸ್ ಮುಖಂಡರಾದ ಜಗದೀಶ್, ಕೊಟ್ರಯ್ಯ, ಇಟ್ಟಿಗುಡಿ ಮಂಜುನಾಥ್, ಜಾಕೀರ್ ಅಲಿ, ಪಂಡಿತ್ ಮತ್ತಿತರರಿದ್ದರು.

# 20 ಲಕ್ಷ ಮೌಲ್ಯದ 102 ಕೆಜಿ ಬೆಳ್ಳಿ ಗೆಜ್ಜೆ ವಶ



ದಾವಣಗೆರೆ, ಜು.5- ನೆರೆ ರಾಜ್ಯದ ತಮಿಳುನಾಡಿನ ಸೇಲಂನಿಂದ ದಾವಣಗೆರೆಗೆ ಅನಧಿಕೃತವಾಗಿ ಸಾಗಾಣಿಕೆ ಮಾಡಲಾಗುತ್ತಿದ್ದ ಸುಮಾರು 20 ಲಕ್ಷ ಮೌಲ್ಯದ 102 ಕೆಜಿ ಬೆಳ್ಳಿ ಗೆಜ್ಜೆಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕ ಸಿ.ಬಿ. ರಿಷ್ಯಂತ್ ತಿಳಿಸಿದರು.

ನಗರದ ಬಡಾವಣೆ ಪೊಲೀಸ್ ಠಾಣಾ ಆವರಣದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಕರಣಕ್ಕೆ ಸಂಬಂಧಿಸಿದಂತೆ ಸೇಲಮ್ ಜಿಲ್ಲೆಯ ಸೆಲ್ವಂ ಹಾಗೂ ಬಾಲಾಜಿ ಎಂಬುವರನ್ನು ಬಂಧಿಸಲಾಗಿದೆ. ಕಳೆದ ಜುಲೈ 3ರಂದು ದಾವಣಗೆರೆಗೆ ಆಗಮಿಸಿದ್ದ ಸೆಲ್ವಂ ಹಾಗೂ ಬಾಲಾಜಿ ಯಾವುದೇ ದಾಖಲೆ ಇಲ್ಲದ ಅಕ್ರಮವಾಗಿ ಸಾಗಿಸುತ್ತಿದ್ದ ಬೆಳ್ಳಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಇಬ್ಬರ ಬಳಿಯೂ ಬೆಳ್ಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆ ಇಲ್ಲ. ಮಾರಾಟ ಮಾಡಲು ಬಂದಿದ್ದೇವೆ ಎಂದು ಹೇಳಿದ್ದಾರೆ. ಯಾವ ಕಾರಣದಿಂದ ಇಷ್ಟೊಂದು ಪ್ರಮಾಣದ ಬೆಳ್ಳಿ ತಂದಿದ್ದರು. ಎಲ್ಲಿಯಾದರೂ ಕದ್ದ ಬೆಳ್ಳಿ ಏನಾದರೂ ಇರಬಹುದೇ ಎಂಬ ವಿಷಯಗಳ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಹಳೆಯ ಬೆಳ್ಳಿ ಖರೀದಿಸಿ ಪಾಲಿಷ್ ಮಾಡಿ ಮಾರಾಟಕ್ಕೇನಾದರೂ ತಂದಿರಬಹುದೇ ಎಂಬ ದಿಕ್ಕಿನಲ್ಲಿ ತನಿಖೆ ನಡೆಸಲಾಗುತ್ತಿದೆ. ಕಳ್ಳತನ ಮಾಡಿಕೊಂಡು ಬಂದು ಕಡಿಮೆ ದರಕ್ಕೆ ಮಾರಾಟಕ್ಕೆ ಯತ್ನಿಸಿರಬಹುದು. ದಾವಣಗೆರೆಯ ಚಿನ್ನ, ಬೆಳ್ಳಿ ಮಾರಾಟಗಾರರ ಸಭೆ ನಡೆಸಿ ಬಿಲ್ ಇಲ್ಲದೇ ಇರುವ ಚಿನ್ನ, ಬೆಳ್ಳಿ ಆಭರಣ ಖರೀದಿ ಮಾಡದಂತೆ ಸೂಚನೆ ನೀಡಲಾಗಿದೆ ಎಂದರು.

ಯಾವುದೇ ಬಿಲ್ ಇಲ್ಲದಿರುವ ಆಭರಣಗಳ ಖರೀದಿ ಮಾಡುವುದರಿಂದ ಕಳ್ಳರು ಸುಲಭವಾಗಿ ಕದ್ದ ಮಾಲು ಮಾರಾಟ ಮಾಡಬಹುದಾ ಗಿದೆ. ಹಾಗಾಗಿ ಬಿಲ್ ಇಲ್ಲದೆ ಖರೀದಿ ಮಾಡದಂತೆ ಹಲವಾರು ಸಭೆಗಳಲ್ಲಿ ತಿಳಿಸಲಾಗಿದೆ. ಚಿನ್ನ ಬೆಳ್ಳಿ ವ್ಯಾಪಾರಸ್ಥರು ಖಾತೆಯ ಮೂಲಕವೇ ಖರೀದಿ ಮಾಡಬೇಕು. ಅನಧಿಕೃತವಾಗಿ ಖರೀದಿ ಮಾಡುವಂತಿಲ್ಲ. ಸಾಕಷ್ಟು ಪರಿಶ್ರಮ ವಹಿಸಿ ಎಲ್ಲರನ್ನೂ ಬಂಧಿಸುವಲ್ಲಿ ಯಶಸ್ವಿಯಾಗಿದೆ. ತಂಡದ ಪ್ರಶಂಸನೀಯ ಕಾರ್ಯಕ್ಕೆ ನಗದು ಬಹುಮಾನ ಸಹ ನೀಡಲಾಗುತ್ತದೆ ಎಂದು ತಿಳಿಸಿದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎ.ಆರ್. ಬಸರಗಿ, ದಾವಣಗೆರೆ ನಗರ ಪೊಲೀಸ್ ಉಪಾಧೀಕ್ಷಕ ನರಸಿಂಹ ತಾಮ್ರಧ್ವಜ್, ಸಿಪಿಐ ಕೆ.ಎನ್. ಗಜೇಂದ್ರಪ್ಪ, ಧನಂಜಯ ಇತರರು ಇದ್ದರು.

# ಜೀವನದಲ್ಲಿ ಯಶಸ್ಸು ಸಾಧಿಸಲು ಗುರಿ ಮುಖ್ಯ





ದಾವಣಗೆರೆ, ಜು. 5- ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ಸು ಸಾಧಿಸಲು ಗುರಿ ಮುಖ್ಯ. ತಾವು ಇತರರಿಗೂ ಒಳಿತನ್ನು ಬಯಸುವಂತಿರಬೇಕು. ಭವಿಷ್ಯದ ಗುರಿ ತಲುಪಲು ತನ್ನದೇ ಆದ ಆದರ್ಶ ಗುಣಗಳನ್ನು ಹೊಂದಿರಬೇಕು ಎಂದು ಅನ್‌ಮೋಲ್ ವಿದ್ಯಾಸಂಸ್ಥೆಯ ಅಧ್ಯಕ್ಷ ಸಿ.ಜಿ. ದಿನೇಶ್ ಹೇಳಿದರು.

ಅನ್‌ಮೋಲ್ ವಿದ್ಯಾಸಂಸ್ಥೆ ವತಿಯಿಂದ ಏರ್ಪಡಿಸಿದ್ದ ಅನ್‌ಮೋಲ್ ವಿಜ್ಞಾನ ಪದವಿ ಪೂರ್ವ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಮಾತನಾಡಿದರು.

ಉಪನ್ಯಾಸಕರು ಮತ್ತು ಸಹಪಾಠಿಗಳೊಂದಿಗೆ ಉತ್ತಮ ಸಂವಹನ ಕೌಶಲ್ಯ ಮತ್ತು ಬೇರೆಯವರಿಗೆ ಸಹಾಯ ಮಾಡುವ ಕರುಣಾ ಭಾವನೆಯನ್ನು ಹೊಂದಿರಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಸಂಸ್ಥೆ ನಿರ್ದೇಶಕಿ ಯಶಾ ದಿನೇಶ್, ಸದಸ್ಯರಾದ ಉಮೇಶ್ ತ್ರಿಪಾಠಿ, ಕೆ.ಎನ್. ಶಿವಲಿಂಗಪ್ಪ, ಡಿ.ವಿ. ರವೀಂದ್ರ, ಪ್ರಾಚಾರ್ಯ ಎಸ್.ಎಂ. ಉಮೇಶ್ ಮತ್ತಿತರರು ಇದ್ದರು. ಇದೇ ವೇಳೆ ಕಳೆದ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 100 ಕ್ಕೆ 100 ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

## ಕ್ಷತ್ರಿಯ ಮರಾಠ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಆಹ್ವಾನ

ದಾವಣಗೆರೆ, ಜು.5- ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಜಿಲ್ಲಾ ಘಟಕದಿಂದ ಎಸ್ಸೆಸ್ಸೆಲ್ಸಿಯಲ್ಲಿ ಶೇ.75ಕ್ಕೂ ಹೆಚ್ಚು ಅಂಕ ಗಳಿಸಿರುವ ಸಮಾಜದ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಶ್ರೀ ಛತ್ರಪತಿ ಶಿವಾಜಿ ಮಹರಾಜ್ ಹಾಗೂ ಶ್ರೀ ಜೀಜಾಮಾತಾ ಪ್ರತಿಭಾ ಪುರಸ್ಕಾರ ನೀಡುತ್ತಿದ್ದು, ಸಮಾಜದ ವಿದ್ಯಾರ್ಥಿಗಳು ಹೆಸರು ನೋಂದಾಯಿಸಲು ತಿಳಿಸಲಾಗಿದೆ.

ಹೆಸರನ್ನು ನೋಂದಾಯಿಸಲು ಇದೇ ದಿನಾಂಕ 10 ಕೊನೆಯ ದಿನವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಕೃಷ್ಣರಾವ್ ಸಾವಂತ್ (9342514779), ಚೇತನ ಶಿವಕುಮಾರ್ (9731289333), ಹನುಮಂತರಾವ್ (7019178175), ಟೇಕೋಜಿರಾವ್ ಹರಿಹರ ತಾ, (6362320831), ಸತೀಶ್ ರಾವ್ ಚನ್ನಗಿರಿ (9606873944), ಅಣ್ಣೋಜಿರಾವ್ ಕಣಿವೆ ಬಿಳಚಿ (9449285481), ಗಜೇಂದ್ರ ಸಿಂಧೆ ಕತ್ತಲಗೆರೆ (9480566890), ಲಕ್ಷ್ಮಣರಾವ್ ಹರಪ್ಪನಹಳ್ಳಿ ತಾ, (9916828264) ಸಂಪರ್ಕಿಸುವಂತೆ ಜಿಲ್ಲಾ ಅಧ್ಯಕ್ಷ ಜಿ.ಹೆಚ್. ಮರಿಯೋಜಿರಾವ್ ಅವರು ತಿಳಿಸಿದ್ದಾರೆ.

## ವೀರಶೈವ ಮಹಾಸಭಾದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜು. 5- ಅಖಿಲ ಭಾರತ ವೀರಶೈವ ಮಹಾಸಭಾ 2021-22 ನೇ ಸಾಲಿನಲ್ಲಿಯೂ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ. 90 ಕ್ಕಿಂತ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಗುವುದು ಎಂದು ರಾಷ್ಟ್ರೀಯ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ, ಸಭಾದ ಜಿಲ್ಲಾಧ್ಯಕ್ಷ ದೇವರಮನಿ ಶಿವಕುಮಾರ್ ತಿಳಿಸಿದ್ದಾರೆ.

ಪ್ರತಿಭಾವಂತ ವಿದ್ಯಾರ್ಥಿಗಳು ಸ್ವ ವಿವರಗಳೊಂದಿಗೆ (ಇತ್ತೀಚಿನ ಒಂದು ಭಾವಚಿತ್ರ, ದೃಢೀಕರಿಸಿದ ಅಂಕಪಟ್ಟಿ ಮತ್ತು ಜಾತಿ ಪ್ರಮಾಣ ಪತ್ರ) ಅರ್ಜಿಯನ್ನು www.veerashaivamahasabha.in ಮಹಾಸಭಾದ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಜು. 7 ರಿಂದ ಜು. 20 ರೊಳಗಾಗಿ ಸಲ್ಲಿಸಬೇಕು. ಆನ್‌ಲೈನ್ ಮೂಲಕ ಬಂದ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುವುದು. ಅಂಚೆ, ಕೋರಿಯರ್ ಅಥವಾ ಖುದ್ದಾಗಿ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ ಎಂದು ಹೇಳಿದ್ದಾರೆ.

## ಮಹಿಳಾ ಸಮಾಜ ಶಾಲೆಯಲ್ಲಿ ಸಂಸತ್



ದಾವಣಗೆರೆ, ಜು.5 - ನಗರದ ಮಹಿಳಾ ಸೇವಾ ಸಮಾಜ ಪ್ರೌಢ ಶಾಲೆಯಲ್ಲಿ ಚುನಾವಣೆ ಮೂಲಕ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, ವಿವಿಧ ಖಾತೆ ಹಂಚಿ ಶಾಲಾ ಸಂಸತ್ ರಚಿಸಲಾಯಿತು. ಈ ಸಂದರ್ಭದಲ್ಲಿ ಮಹಿಳಾ ಸೇವಾ ಸಮಾಜದ ನಿರ್ದೇಶಕರಾದ ಶ್ರೀಮತಿ ನೀಲಮ್ಮ, ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶಿಕ್ಷಕಿ ಶ್ರೀಮತಿ ಟಿ. ಭೋಜಮ್ಮ ಆಯೋಜಿಸಿದ್ದರು.

## ಜಿಲ್ಲೆಯಲ್ಲಿ ಯೋಗಥಾನ್-2022

ದಾವಣಗೆರೆ, ಜು.5- ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಆಗಸ್ಟ್ 12 ರಿಂದ 14 ರವರೆಗೆ ಯೋಗಥಾನ್-2022 ಕಾರ್ಯಕ್ರಮವನ್ನು ಸಂಘಟಿಸಿ ಗಿನ್ನಿಸ್ ದಾಖಲೆ/ವಿಶ್ವ ದಾಖಲೆ ಸ್ಥಾಪಿಸಲು ದಾವಣಗೆರೆ ಜಿಲ್ಲೆಯಲ್ಲಿ ಯೋಗಥಾನ್-2022 ಆಯೋಜಿಸಬೇಕಾಗಿರುತ್ತದೆ.

ಜಿಲ್ಲೆಯ ಯೋಗ ಸಂಬಂಧಿತ ಸಂಘ-ಸಂಸ್ಥೆಗಳು ಹಾಗೂ ಇತರೆ ಯೋಗಾಸಕ್ತ ಸಂಸ್ಥೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ಜು.06 ರಂದು ಮಧ್ಯಾಹ್ನ 3.30 ಕ್ಕೆ ಸಹಾಯಕ ನಿರ್ದೇಶಕರ ಕಛೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಜಿಲ್ಲಾ ಕ್ರೀಡಾಂಗಣ, ದಾವಣಗೆರೆ ಇಲ್ಲಿ ನಡೆಯುವ ಸಭೆಗೆ ಹಾಜರಾಗಿ ಅಮೂಲ್ಯ ಸಲಹೆಗಳನ್ನು ನೀಡಬಹುದಾಗಿದೆ.

## ಜಗಳೂರಿನಲ್ಲಿ ಆರೋಗ್ಯ ತಪಾಸಣೆ



ಜಗಳೂರು, ಜು.5 - ಇಲ್ಲಿನ ಕೆ.ಎಂ. ಕಲ್ಲಯ್ಯ ಸ್ಮಾರಕ ಆರೋಗ್ಯ ಕೇಂದ್ರದ ನಾಲ್ಕನೇ ವಾರ್ಷಿಕೋತ್ಸವದ ಅಂಗವಾಗಿ ಇಂಡಿಯಾನಾ ಎಸ್.ಜೆ.ಎಂ. ಹಾರ್ಟ್ ಸೆಂಟರ್, ಚಿತ್ರದುರ್ಗದ ಬಸವೇಶ್ವರ ಆಸ್ಪತ್ರೆ ವತಿಯಿಂದ ಉಚಿತ ಹೃದಯ ತಪಾಸಣೆ ಮತ್ತು ಕಣ್ಣಿನ ತಪಾಸಣಾ ಶಿಬಿರವು ಕೆ.ಎಂ. ಕಲ್ಲಯ್ಯ ಸ್ಮಾರಕ ಮಲ್ಟಿಸ್ಪೆಷಾಲಿಟಿ ಆರೋಗ್ಯ ಕೇಂದ್ರದಲ್ಲಿ ನಿನ್ನೆ ನಡೆಯಿತು.

ಶಿಬಿರದಲ್ಲಿ ಸುಮಾರು 250 ರೋಗಿಗಳಿಗೆ ಬಿ.ಪಿ., ಜಿ.ಆರ್.ಬಿ.ಎಸ್., ಇಸಿಜಿ, 20 ಇಕ್ಕೋ ಮತ್ತು ಹೃದಯ ತಜ್ಞರೊಂದಿಗೆ ಸಮಾಲೋಚನೆ ಹಾಗೂ ನೇತ್ರ ತಜ್ಞರಿಂದ ಗ್ಲಾಕೋಮಾ, ರೆಟಿನಾ ಪರೀಕ್ಷೆ ಮತ್ತು ಕಂಪ್ಯೂಟರೀಕೃತ ಕಣ್ಣಿನ ತಪಾಸಣೆ ನಡೆಯಿತು.

ಇಂಡಿಯಾನಾ ಎಸ್.ಜೆ.ಎಮ್ ನ ಹೃದಯ ತಜ್ಞರಾದ ಡಾ. ಜಿ. ಮಂಜುನಾಥ್, ಡಾ. ವಸಂತ್ ಕುಮಾರ್, ಬಸವೇಶ್ವರ ಆಸ್ಪತ್ರೆಯ ನೇತ್ರ ತಜ್ಞರಾದ ಡಾ. ಶಿಮ ಮರಿಯಮ್, ಡಾ.ಅನುಷ. ದಾವಣಗೆರೆ ರೋಟರಿ ದಕ್ಷಿಣದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಆರೋಗ್ಯ ಕೇಂದ್ರದ ಡಾ. ಹಾಲಸ್ವಾಮಿ ಕಂಬಾಳಿಮಠ, ಶಿಬಿರದ ಸಂಯೋಜಕರಾದ ಮಂಜಣ್ಣ ಮತ್ತು ವೀರೇಶ್ ಮತ್ತು ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ಎನ್‌ಎಸ್‌ಎಸ್ ಗೀತೆ, ದೇಶಭಕ್ತಿಗೀತೆಗಳ ತರಬೇತಿ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದ ರಾಷ್ಟ್ರೀಯ ಸೇವಾ ಯೋಜನೆ ಘಟಕ 1 ಮತ್ತು 2 ರ ವತಿಯಿಂದ ಎನ್‌ಎಸ್‌ಎಸ್ ಗೀತೆ ಹಾಗೂ ದೇಶಭಕ್ತಿಗೀತೆಗಳ ತರಬೇತಿ ಶಿಬಿರವು ಇಂದು ಮತ್ತು ನಾಳೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಮೈಸೂರು ವಿಶ್ವ ವಿದ್ಯಾಲಯದ ಸಂಶೋಧಕರಾದ ಅಮ್ಮ ರಾಮಚಂದ್ರ ಜಿ ಉದ್ಘಾಟಿಸಲಿದ್ದು, ಪ್ರಾಚಾರ್ಯ ಡಾ. ಎಚ್.ಆರ್. ಆಂಜಿನಪ್ಪ ಅಧ್ಯಕ್ಷತೆ ವಹಿಸುವರು. ಕಾಲೇಜಿನ ವ್ಯವಸ್ಥಾಪಕರಾದ ಗೀತಾ ದೇವಿ, ಐಕ್ಯೂಎಸಿ ಸಂಚಾಲಕ ಪ್ರೊ. ಜಿ.ಆರ್. ನಟರಾಜ್ ಉಪಸ್ಥಿತರಿರುವರು ಎಂದು ಎನ್‌ಎಸ್‌ಎಸ್ ಘಟಕ-1ರ ಸಂಯೋಜನಾಧಿಕಾರಿ ಪ್ರೊ. ಎಸ್. ಎಂ. ಗುರುದೇವ್ ತಿಳಿಸಿದ್ದಾರೆ.

## ಮಾಹಿತಿ ತಡೆ ಆದೇಶ : ಕೇಂದ್ರದ ವಿರುದ್ಧ ಹೈಕೋರ್ಟ್‌ನಲ್ಲಿ ಟ್ವಿಟ್ಟರ್ ಅರ್ಜಿ

ನವದೆಹಲಿ, ಜು. 5 - ಹೊಸ ಐ.ಟಿ. ಕಾಯ್ದೆಯ ಅನ್ವಯ ಕೆಲ ಅಂಶಗಳನ್ನು ತೆಗೆದು ಹಾಕುವಂತೆ ಕೇಂದ್ರ ಸರ್ಕಾರ ಆದೇಶ ಹೊರಡಿಸಿರುವುದನ್ನು ಪ್ರಶ್ನಿಸಿ ಕರ್ನಾಟಕ ಹೈಕೋರ್ಟ್‌ನಲ್ಲಿ ಟ್ವಿಟ್ಟರ್ ಅರ್ಜಿ ದಾಖಲಿಸಿದೆ. ಜೂನ್ 2022ರಂದು ಕೇಂದ್ರ ಸರ್ಕಾರ ಹೊರಡಿಸಿರುವ ಆದೇಶ, ಅತಾರ್ಕಿಕ ಹಾಗೂ ಅತಿರೇಕದ್ದು ಎಂದು ಟ್ವಿಟ್ಟರ್ ವಾದಿಸಿದೆ. ಹಲವಾರು ಟ್ವೀಟ್‌ಗಳನ್ನು ತೆಗೆದು ಹಾಕುವ ಬಗ್ಗೆ ಯಾವುದೇ ಆಧಾರಗಳಿಲ್ಲ. ಈ ಬಗ್ಗೆ ನ್ಯಾಯಾಲಯ ಪರಾಮರ್ಶಿಸಬೇಕು ಎಂದು ಟ್ವಿಟ್ಟರ್ ಅರ್ಜಿಯಲ್ಲಿ ಕೋರಿದೆ.


WANTED

SEEDS NGO- DAVANGERE

Post : Techincal Officer for Spirulina Cultivation Project

Qulification : B.Sc.,/M.Sc., - Microbiology/Biotechnology

Experience : 1 Year Interview : 9.7.2022. Time : 11 AM

Work Place : Neelagunda Cross, Harapanahalli (TQ)

Contact : Mahesh 89044 56566 Sanjeevaiah 94483 73997


# ಪತ್ರಕರ್ತರ ಮೇಲೆ ಹಲ್ಲೆ : ಕ್ರಮಕ್ಕೆ ಆಗ್ರಹ

## ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಪ್ರತಿಭಟನೆ



ದಾವಣಗೆರೆ, ಜು.5- ಹಾವೇರಿಯಲ್ಲಿ ಪತ್ರಕರ್ತರ ಮೇಲೆ ಹಲ್ಲೆ ಮಾಡಿದವರ ಮೇಲೆ ಕಠಿಣ ಕಾನೂನು ಕ್ರಮಕ್ಕೆ ಆಗ್ರಹಿಸಿ ನಗರದಲ್ಲಿಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದಾವಣಗೆರೆ ಜಿಲ್ಲಾ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ಉಪವಿಭಾಗಾಧಿಕಾರಿ ಕಚೇರಿ ಬಳಿ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಸೇರಿದಂತೆ, ಪ್ರಮುಖರ ನೇತೃತ್ವದಲ್ಲಿ ಜಮಾಯಿಸಿದ್ದ ಸಂಘದ ಪದಾಧಿಕಾರಿಗಳು, ಪತ್ರಕರ್ತರು ಹಾವೇರಿಯಲ್ಲಿ ಸಹದ್ಯೋಗಿ ಮಿತ್ರರ ಮೇಲೆ ಮೊನ್ನೆ ನಡೆದ ಹಲ್ಲೆ ಪ್ರಕರಣವನ್ನು ಖಂಡಿಸಿದರು. ನಂತರ ಉಪವಿಭಾಗಾಧಿಕಾರಿ ಶ್ರೀಮತಿ ದುರ್ಗಾಶ್ರೀ ಅವರ ಮುಖಾಂತರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಇ.ಎಂ. ಮಂಜುನಾಥ, ಶನಿವಾರ ಮಧ್ಯಾಹ್ನ ಹಾವೇರಿ ನಗರದ ಪ್ರವಾಸಿ ಮಂದಿರದಲ್ಲಿ ಮಂಜುಳಾ ಪೂಜಾರ್ ಹಾಗೂ ಅವರ ಸಹಚರರು ಖಾಸಗಿ ಸುದ್ದಿವಾಹಿನಿಯ ಛಾಯಾಗ್ರಾಹಕ ಮತ್ತು ವರದಿಗಾರರ ಮೇಲೆ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ ಘಟನೆ ಅಕ್ಷಮ್ಯ ಅಪರಾಧ ಎಂದು ಆಕ್ಷೇಪಿಸಿದರು.

ಸಂಘದ ರಾಜ್ಯ ಸಮಿತಿ ಸದಸ್ಯ ಕೆ. ಚಂದ್ರಣ್ಣ, ಘಟಕದ ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್ ಮಾತನಾಡಿದರು.

ಉಪಾಧ್ಯಕ್ಷರಾದ ಹೆಚ್.ಎನ್. ಪ್ರಕಾಶ್, ಆರ್. ಎಸ್. ತಿಪ್ಪೇಸ್ವಾಮಿ, ಜೆ.ಎಸ್. ವೀರೇಶ್, ಜಿ.ಆರ್. ನಿಂಗೋಜಿರಾವ್, ಕಾರ್ಯಕಾರಿ ಸಮಿತಿ ಸದಸ್ಯರಾದ ಬಿ.ಎಸ್. ಮುದ್ದಯ್ಯ, ಎ.ಪಿ. ಸಂಜಯ್, ಎನ್. ನಂದನ್ ಕುಮಾರ್, ವಿ.ಬಿ. ಅನಿಲ್ ಕುಮಾರ್, ಸಿ. ವೇದಮೂರ್ತಿ, ಎನ್.ಎಂ. ಇಂದುಶೇಖರ್ ನಿಶಾನಿಮಠ, ಡಾ. ಜೈಮುನಿ, ಎಸ್.ಬಿ. ವಿಜಯ್ ಕುಮಾರ್, ಪಿ.ಎಸ್. ಲೋಕೇಶ್, ನಿಂಗಪ್ಪ ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಖಜಾಂಚಿ ಎನ್.ವಿ. ಬದ್ರಿನಾಥ್ ಸ್ವಾಗತಿಸಿದರು.

# ಪತ್ರಕರ್ತರ ಮೇಲಿನ ಹಲ್ಲೆಗೆ ತೀವ್ರ ಖಂಡನೆ

## ಆರೋಪಿಗಳ ವಿರುದ್ಧ ಕ್ರಮಕ್ಕೆ ವರದಿಗಾರರ ಕೂಟ ಆಗ್ರಹ



ದಾವಣಗೆರೆ, ಜು.5- ಸುದ್ದಿ ವಾಹಿನಿಯ ವರದಿಗಾರರು ಹಾಗೂ ವಿಡಿಯೋ ಜರ್ನಲಿಸ್ಟ್ ಮೇಲೆ ಹಾವೇರಿಯಲ್ಲಿ ನಡೆದಿರುವ ಹಲ್ಲೆ ಖಂಡಿಸಿ, ಜಿಲ್ಲಾ ವರದಿಗಾರರ ಕೂಟದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಉಪವಿಭಾಗಾಧಿಕಾರಿ ಕಚೇರಿ ಮುಂಭಾಗ ಸೋಮವಾರ ಪ್ರತಿಭಟನೆ ನಡಸಿದ ಕೂಟದ ಸದಸ್ಯರು, ಹಲ್ಲೆ ನಡೆಸಿರುವ ಆರೋಪಿಗಳನ್ನು ಕೂಡಲೇ ಬಂಧಿಸಿ, ನಿರ್ದಾಕ್ಷಿಣ್ಯ ಕ್ರಮ ವಹಿಸಬೇಕು. ಒತ್ತಾಯಿಸಿ, ಉಪ ವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ ಮಾತನಾಡಿ, ಸಮಾಜದ ಅಂಕು-ಡೊಂಕು ತಿದ್ದುವ ಸುದ್ದಿ ಮಾಡುವ ಪತ್ರಕರ್ತರಿಗೆ ರಕ್ಷಣೆ ಇಲ್ಲದಂತಾಗಿದೆ. ಪತ್ರಕರ್ತರ ಮೇಲೆ ಈ ರೀತಿ ಹಲ್ಲೆ ನಡೆದಿರುವುದು ಇದೇ ಮೊದಲಲ್ಲ. ಸಮಾಜದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಅವ್ಯವಹಾರಗಳ ಬಗ್ಗೆ ನೈಜ ವರದಿ ಮಾಡುವ ಪತ್ರಕರ್ತರಿಗೆ ರಕ್ಷಣೆಯೇ ಇಲ್ಲದಂತಾಗಿದೆ ಎಂದು ವಿಷಾದಿಸಿದರು.

ನ್ಯೂಸ್ ಫಸ್ಟ್ ವರದಿಗಾರ ಈರಯ್ಯ, ಶಿವಾನಂದ, ವಿಡಿಯೋ ಜರ್ನಲಿಸ್ಟ್ ಪ್ರಕಾಶ್ ಮೇಲೆ ಹಲ್ಲೆ ನಡೆಸಿರುವುದು ಖಂಡನೀಯ ಎಂದರು.

ಹಿರಿಯ ಪತ್ರಕರ್ತ ನಾಗರಾಜ್ ಬಡದಾಳ್ ಮಾತನಾಡಿ, ವೈದ್ಯರ ಮೇಲೆ ನಡೆದ ಹಲ್ಲೆಗಳನ್ನು ಹತ್ತಿಕ್ಕಿ ವೈದ್ಯರ ರಕ್ಷಣೆಗೆ ಕಾನೂನು ರೂಪಿಸಿದಂತೆ ಸರ್ಕಾರಗಳು ಮಾಧ್ಯಮ ರಂಗದ ಪತ್ರಕರ್ತರ ರಕ್ಷಣೆಗಾಗಿ ಕಾನೂನು ರೂಪಿಸಬೇಕು. ಆಗ ಇಂತಹ ಹಲ್ಲೆಗಳನ್ನು ತಡೆಗಟ್ಟಬಹುದು ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಕೂಟದ ಖಜಾಂಚಿ ಮಧು ಕುಂದವಾಡ, ಸದಸ್ಯರಾದ ರಮೇಶ್ ಜಹಗೀರ್‌ದಾರ್, ಸಿದ್ದಯ್ಯ, ಎಂ.ವೈ. ಸತೀಶ್, ಡಿ.ಎಂ. ಮಹೇಶ್, ಡಿ. ರಂಗನಾಥ್ ರಾವ್, ರವಿಬಾಬು, ಬಾಲಕೃಷ್ಣ ಶಿಬರ್ಲಾ, ವೀರೇಶ್, ಫಕೃದ್ದೀನ್, ವಿನಾಯಕ್ ಪೂಜಾರ್, ದೇವಿಕಾ, ತೇಜಸ್ವಿನಿ, ಕೆ.ಎನ್. ಮಲ್ಲಿಕಾರ್ಜುನ್, ಕಾವ್ಯ ಬಿ.ಕೆ., ಹನುಮಂತ ರಾವ್, ಬಸವರಾಜ್, ವಸಂತಕುಮಾರ್, ಯೋಗರಾಜ್, ಜೈಮುನಿ, ಅಣ್ಣಪ್ಪ, ಪರಶುರಾಮ್ ಮತ್ತಿತರರು ಉಪಸ್ಥಿತರಿದ್ದರು.

## IN THE COURT OF THE FIRST ADDITONAL SENIOR CIVIL JUDGE, AT DAVANGAGERE

O.S. 25 / 2014

Plaintiff : **Sri. Kamalakar Varnekar,** V/s

Defendants : **Sri. Venkatesh Gowda and others,**

Defendants : **3) M/s A.S. Developers,** Partnership Firm, Represented by its Partners ;

**a) Sri. B.G. Ajay Kumar** S/o Late. B.G. Jayanna, Aged about 43 years, Door No.91, Bharath Arcade, Lakshmi Floor Mill Road, 'A' Block S.S. Layout, DAVANGERE

**b) Sri. B.H. Sridhar,** S/o B.T. Hemasundar Raj, Aged about 42 years, Door No.91, Bharath Arcade, Lakshmi Floor Mill Road, 'A' Block S.S. Layout, DAVANAGERE

**4) Sri. Rohith C Jain,** (Father's name not known to the plaintiff), Major, Businessman, Kaipet, DAVANAGERE.

**SUIT SUMMONS TO THE DEFENDENTS 3(A),3(B) AND DEFENDANT NO.4 BY SUBSTITUTED SERVICE BY PAPER PUBLICATION**

Whereas the above named plaintiff has filed the suit against the defendants for declaration that he is the owner in possession and enjoyment of the suit schedule property i.e. the agricultural land bearing Re.Sy, No. 271/1AP, measuring 8 guntas of Avaragere village and for the consequential relief of injunctions. The defendants 3(a), 3(b) and defendant No.4 avoided the service of the suit summons sent to them through the Hon'ble Court and also by registered post with acknowlegement due. Hence, this paper publication.

Now, the above case is posted to 8th day of August 2022 for appearance of the defendents 3(a), 3(b) and defendant No.4. Therefore, the above named defendants are hereby called upon to appear in the above case on 08th day of August 2022 at 11.00AM. either presonally or through an advocate, failing which all further proceedings will take place in your absence.

Given under my hand and seal on 04th day of July 2022 at Davanagere

Davangere
Date : 04.07.2022

*By order of the court*
*Sd/-* **Chief Ministerial Officer,**
Principal Civil Judge and CJM Court, Davanagere.

## ಜಮೀರ್ ಅಹಮದ್ ಖಾನ್ ನಿವಾಸಗಳ ಮೇಲೆ ಎಸಿಬಿ ದಾಳಿ



ಬೆಂಗಳೂರು, ಜು. 5 - ಭ್ರಷ್ಟಾಚಾರ ನಿಗ್ರಹ ದಳ (ಎ.ಸಿ.ಬಿ.) ಅಧಿಕಾರಿಗಳು ಕಾಂಗ್ರೆಸ್ ಶಾಸಕ ಜಮೀರ್ ಅಹಮದ್ ಖಾನ್ ಅವರ ಐದು ತಾಣಗಳ ಮೇಲೆ ದಾಳಿ ನಡೆಸಿದ್ದಾರೆ.

ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಬಳಿ ಅವರ ನಿವಾಸ, ಸಿಲ್ವರ್ ಓಕ್ ಅಪಾರ್ಟ್‌ಮೆಂಟ್‌ನಲ್ಲಿರುವ ಫ್ಲಾಟ್, ಸದಾಶಿವನಗರದಲ್ಲಿರುವ ಅತಿಥಿ ಗೃಹ, ಬನಶಂಕರಿಯಲ್ಲಿರುವ ಜಿ.ಕೆ. ಅಸೋಸಿಯೇಟ್ಸ್ ಕಚೇರಿ ಹಾಗೂ ಕಲಾಸಿಪಾಳ್ಯದಲ್ಲಿರುವ ನ್ಯಾಷನಲ್ ಟ್ರಾವೆಲ್ಸ್ ಕಚೇರಿಗಳ ಮೇಲೆ ದಾಳಿ ನಡೆಸಲಾಗಿದೆ. ಎ.ಸಿ.ಬಿ.ಯ ಹಲವು ತಂಡಗಳು ದಾಳಿ ನಡೆಸಿವೆ. ಹಲವಾರು ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಎ.ಸಿ.ಬಿ. ಅಧಿಕಾರಿಯೊಬ್ಬರು ಹೇಳಿದ್ದಾರೆ. ಕಳೆದ ವರ್ಷ ಆಗಸ್ಟ್‌ನಲ್ಲಿ ಖಾನ್ ನಿವಾಸ ಹಾಗೂ ಮಾಜಿ ಸಚಿವ ಆರ್. ರೋಶನ್ ಬೇಗ್ ನಿವಾಸಗಳ ಮೇಲೆ ಜಾರಿ ನಿರ್ದೇಶನಾಲಯ ದಾಳಿ ನಡೆಸಿತ್ತು. 4 ಸಾವಿರ ಕೋಟಿ ರೂ.ಗಳ ಐ.ಎಂ.ಎ. ಪೊಂಜಿ ಹಗರಣಕ್ಕೆ ಸಂಬಂಧಿಸಿದಂತೆ ಈ ಕ್ರಮ ತೆಗೆದುಕೊಳ್ಳಲಾಗಿತ್ತು.


## ಭಾವಪೂರ್ಣ ಶ್ರದ್ಧಾಂಜಲಿ



ಸ್ನೇಹಿತರು, ಹಿತೈಷಿಗಳೂ ಆದ

**ಶ್ರೀ ವಿರೂಪಾಕ್ಷಪ್ಪ**
**( ಮಹೇಶ್ ಇಂಡಸ್ಟ್ರೀಸ್ ಮಾಲೀಕರು)**

ಇವರು ದಿನಾಂಕ 05.07.2022ರ ಮಂಗಳವಾರ ಮುಂಜಾನೆ ನಮ್ಮನ್ನಗಲಿದ್ದು, ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಾ, ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವ.

**ಶ್ರೀ ವೀರಹನುಮಾನ್ ರೈಸ್ ಮಿಲ್,**
**ಶ್ರೀ ವೀರಹನುಮಾನ್ ಆಗ್ರೋ ರೈಸ್ ಟೆಕ್**
**ಎಂ. ದೊಡ್ಡಪ್ಪ ಅಂಡ್ ಸನ್ ಹಾಗೂ**
**ಸಿಬ್ಬಂದಿ ವರ್ಗ, ಲೋಕಿಕೆರೆ ರಸ್ತೆ, ದಾವಣಗೆರೆ.**



## ಮಹೇಶ್ ಇಂಡಸ್ಟ್ರೀಸ್ ಮಾಲೀಕರಾದ ಬಿಸಲೇರಿ ವಿರುಪಾಕ್ಷಿ ನಿಧನ

ದಾವಣಗೆರೆ ಲೋಕಿಕೆರೆ ರಸ್ತೆಯಲ್ಲಿರುವ
ಮಹೇಶ್ ಇಂಡಸ್ಟ್ರೀಸ್ ಮಾಲೀಕರಾದ

**ಶ್ರೀ ಬಿಸಲೇರಿ ವಿರುಪಾಕ್ಷಿ**

ಅವರು, ದಿನಾಂಕ 05.07.2022ರ ಮಂಗಳವಾರ ಬೆಳಗಿನ ಜಾವ 3 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 54 ವರ್ಷ ವಯಸ್ಸಾಗಿತ್ತು. ವಿರುಪಾಕ್ಷಿ ಅವರು, ಕಿರಾಣಿ ವರ್ತಕರಾಗಿದ್ದ ದಿ. ಬಿಸಲೇರಿ ಮಹೇಶ್ವರಪ್ಪ ಅವರ ಪುತ್ರ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 05.07.2022ರ ಮಂಗಳವಾರ ಸಂಜೆ 5 ಗಂಟೆಗೆ ಶಾಮನೂರಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ**


## ಖೈದಿಗಳ ಬಿಡುಗಡೆಗೆ ಕೇಂದ್ರದ ನಿರ್ಧಾರ

ನವದೆಹಲಿ, ಜು. 5 - ಆಜಾದಿ ಕಾ ಅಮೃತ್ ಮಹೋತ್ಸವದ ಸಂದರ್ಭದಲ್ಲಿ 50 ವರ್ಷ ಮೀರಿದ ಹೆಂಗಸರು, ತೃತೀಯ ಲಿಂಗೀಯ ಖೈದಿಗಳನ್ನು ಹಂತ ಹಂತವಾಗಿ ಜೈಲುಗಳಿಂದ ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

60 ವರ್ಷ ಮೀರಿದ ಪುರುಷರು ಹಾಗೂ ವಿಕಲಚೇತನ ಖೈದಿಗಳನ್ನೂ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ. ಆದರೆ, ಇವರು ಅರ್ಧದಷ್ಟು ಶಿಕ್ಷೆ ಪೂರ್ಣಗೊಳಿಸಿರಬೇಕು ಮತ್ತು ಜೈಲುಗಳಲ್ಲಿ ಸನ್ನಡತೆ ತೋರಿರಬೇಕು.

ಬಡವರು ಜೈಲು ಅವಧಿ ಮುಗಿಸಿದ್ದರೂ ಸಹ, ದಂಡವನ್ನು ಪಾವತಿಸಲು ಸಾಧ್ಯವಾಗದೇ ಜೈಲಿನಲ್ಲಿರುವವರನ್ನೂ ಬಿಡುಗಡೆ ಮಾಡಲಾಗುವುದು. ಮರಣ ದಂಡನೆ, ಜೀವಾವಧಿ ಶಿಕ್ಷೆ, ಅತ್ಯಾಚಾರ, ಉಗ್ರವಾದ, ವರದಕ್ಷಿಣೆ ಹಾಗೂ ಅಕ್ರಮ ಹಣ ಪ್ರಕರಣಗಳಲ್ಲಿ ಬಂಧಿತರಿಗೆ ಶಿಕ್ಷೆಯಲ್ಲಿ ವಿನಾಯಿತಿ ಇಲ್ಲ.

ದೇಶಾದ್ಯಂತದ ಜೈಲುಗಳ ಸಾಮರ್ಥ್ಯ 4.03 ಲಕ್ಷ ಆಗಿದೆ. ಪ್ರಸಕ್ತ 4.78 ಲಕ್ಷ ಬಂಧಿತರಿದ್ದಾರೆ. ಇವರಲ್ಲಿ ಲಕ್ಷ ಮಹಿಳೆಯರು. ಎಲ್ಲಾ ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರ ಪತ್ರ ಬರೆದಿದೆ.


## ಭಾವಪೂರ್ಣ ಶ್ರದ್ಧಾಂಜಲಿ



ನಮ್ಮ ಟ್ರಸ್ಟಿನ ಸದಸ್ಯರೂ, ಮಹೇಶ್ ಇಂಡಸ್ಟ್ರೀಸ್ ಮಾಲೀಕರೂ ಆದ

**ಬಿಸಲೇರಿ ವಿರುಪಾಕ್ಷಿ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.

✦ **ಅಥಣಿ ಎಸ್.ವೀರಣ್ಣ,** ಅಧ್ಯಕ್ಷರು ✦ **ಎನ್.ಅಡಿವೆಪ್ಪ,** ಪ್ರಧಾನ ಕಾರ್ಯದರ್ಶಿ
✦ **ಎನ್.ವಿ.ಗಿರೀಶ್,** ಖಜಾಂಚಿ
ಮತ್ತು **ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು**

**ಶ್ರೀ ಅನ್ನದಾನೀಶ್ವರ ಸಾರ್ವಜನಿಕ ಸೇವಾ ಟ್ರಸ್ಟ್**
ಶ್ರೀ ಅನ್ನದಾನೀಶ್ವರ ಶಾಖಾಮಠ, ಶ್ರೀ ಡಿ.ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್, ದಾವಣಗೆರೆ.








JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte